ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಲ್ಲಾನ್‌ಪುರನಲ್ಲಿ ಅಫ್ಘಾನಿಸ್ತಾನ ವಿರುದ್ಧ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ 21 ರನ್‌ಗೆ 3 ವಿಕೆಟ್ ಪಡೆದು ಸಂಭ್ರಮಿಸಿದ ಭಾರತ ತಂಡದ ಮಾನವ್ ಸೂತರ್...

08 ಜೂನ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 89 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಜೀವ ವಿಕಸನಕ್ಕೆ ನೋವು ಬೇಕೇ ಬೇಕು ! » 2



ಭಾರತ 546 ರನ್‌ಗೆ ಮೊದಲ ಇನ್ನಿಂಗ್ಸ್ ಡಿಕ್ಲೇರ್ » 3



ಬದುಕಿಗೆ ದಾರಿ ತೋರುವ ಶಾಲೆಯ ಮೇಲೆ ಪ್ರೀತಿ ಇರಲಿ » 4

# ಜೆಡಿಎಸ್ ಕಾರ್ಯಕರ್ತರಿಗೆ ಮುಕ್ತ ಆಹ್ವಾನ

## ನನ್ನ ಮನೆ ಬಾಗಿಲು ನಿಮಗೂ ತೆರೆದಿದೆ | ಕೃತಜ್ಞತಾ ಸಭೆಯಲ್ಲಿ ಸಿ.ಎಂ.

• ಪ್ರಜೋದಯ ವರದಿ

**ಬೆಂಗಳೂರು:** ಜನತಾ ದಳದ ಕಾರ್ಯಕರ್ತರಿಗೂ ಈ ಡಿ.ಕೆ.ಶಿವಕುಮಾರ್ ಇದ್ದಾನೆ. ನನ್ನ ಮನೆ ಬಾಗಿಲು ನಿಮಗೂ ತೆರೆದಿದೆ. ನೀವು ನನ್ನ ಸಹಾಯ ಪಡೆಯಬಹುದೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜೆಡಿಎಸ್ ಕಾರ್ಯಕರ್ತರಿಗೆ ಮುಕ್ತ ಆಹ್ವಾನ ನೀಡಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಭಾನುವಾರ ತವರು ಕ್ಷೇತ್ರ ಕನಕಪುರದ ವಿವಿಧ ಭಾಗಗಳಿಗೆ ಭೇಟಿ ನೀಡಿ ಜನರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ನಿಮಗೆ ಒಳ್ಳೆಯದು ಮಾಡಲು ನಾನು ಸಿದ್ಧನಾಗಿದ್ದೇನೆ. ದೇವರು ವರ, ಶಾಪ ನೀಡುವುದಿಲ್ಲ, ಅವಕಾಶ ಮಾತ್ರ ನೀಡುತ್ತಾನೆ. ನೀವು ಸಿಕ್ಕಂತಹ ಅವಕಾಶ ಬಳಸಿಕೊಳ್ಳಬೇಕು. ಬಿಜೆಪಿಯನ್ನು ದೂರ ಇಡಬೇಕೆಂದು ಹಿಂದೆ ಅನಿತಾ ಕುಮಾರಸ್ವಾಮಿ ಹಾಗು ಕುಮಾರಸ್ವಾಮಿ ಅವರಿಗೆ ನಾವು ಬೆಂಬಲ ನೀಡಿದ್ದೆವು. ಈ ಹಿಂದೆ ಆಗಿದ್ದನ್ನು ಈಗ ಚರ್ಚೆ ಮಾಡುವುದಿಲ್ಲವೆಂದು ಹೇಳಿದರು.

ಯಾರನ್ನೂ ದ್ವೇಷ ಮಾಡಬೇಡಿ, ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗಿ ಈ ಕ್ಷೇತ್ರದಲ್ಲಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗಲಾಗುವುದು. ಲೋಕಸಭೆ ಚುನಾವಣೆಯಲ್ಲಿ ನಮಗೆ ಬೆಂಬಲ ಕೊಡಲಿಲ್ಲವೆಂದು ದೂಷಣೆ ಮಾಡುವುದಿಲ್ಲ. ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಏನೋ ಒಮ್ಮೆ ಹೆಚ್ಚು ಕಮ್ಮಿ ಆಗಿ ತಪ್ಪಾಗಿದೆ. ಅದನ್ನು ಕ್ಷಮಿಸಿ, ಮುಂದೆ ನನ್ನನ್ನು ಯಾವ ರೀತಿ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲಿಸಿದ್ದೀರೋ ಅದೇ ರೀತಿ ನಮ್ಮವರನ್ನು ಬೆಂಬಲಿಸಿ. ಎಲ್ಲರೂ ಒಂದಾಗಿ ಹೋಗೋಣ. ನಮ್ಮ ಮುಖಂಡರು ಯಾರ ವಿರುದ್ಧವೂ ದ್ವೇಷ ಸಾಧಿಸಬಾರದು. ಅವರ ಮನ ಪರಿವರ್ತನೆ ಆಗಲಿ ಎಂದು ಪ್ರಾರ್ಥಿಸಿ ಎಂದರು.



**ನುಡಿದಂತೆ ನಡೆದ ಸಿದ್ದರಾಮಯ್ಯ**

ನನ್ನ ಕಷ್ಟ ಕಾಲದಲ್ಲಿ ನೀವು ನನಗಾಗಿ ಪ್ರಾರ್ಥನೆ ಮಾಡಿದ್ದೀರಿ, ಹರಕೆ ಕಟ್ಟಿಕೊಂಡಿದ್ದೀರಿ, ಹೋರಾಟ ಮಾಡಿದ್ದೀರಿ, ಪ್ರಕರಣ ಹಾಕಿಸಿ ಕೊಂಡಿದ್ದೀರಿ. ನಿಮ್ಮ ಶ್ರಮಕ್ಕೆ ಈಗ ಫಲ ಸಿಕ್ಕಿದೆ. ಎರಡು ದಿನ ತಡವಾ ದರೂ ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿದ್ದಾರೆ. ನಾನು ಪಕ್ಷದ ಮಾರ್ಗದರ್ಶನದಂತೆ ನಡೆಯ ಬೇಕು. ನಾನು ಹಾಗು ಸಿದ್ದರಾಮಯ್ಯ ಸೇರಿ 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿ, ಸರ್ಕಾರ ರಚಿಸಲು ನೀವು ಅನುವು ಮಾಡಿ ಕೊಡಬೇಕೆಂದರು.

ನನಗೆ ಜಾತಿ, ಧರ್ಮ ಬೇಧ-ಭಾವದ ಮೇಲೆ ನಂಬಿಕೆ ಇಲ್ಲ. ಕುವೆಂಪು ಅವರು ಹೇಳಿರುವಂತೆ ಈ ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮಾಡಬೇಕು. ಎಲ್ಲಾ ಸಮುದಾಯದವರನ್ನು ನಾನು ನನ್ನ ಅಣ್ಣ-ತಮ್ಮಂದಿರೆಂದು ಕಂಡಿದ್ದೇನೆಂದರು.

> ನನ್ನನ್ನು ಜನರು ಬಂಡೆ ಎಂದು ಕರೆಯುತ್ತಾರೆ. ಆದರೆ, ಕಲ್ಲು ಪ್ರಕೃತಿ, ಕಡಿದರೆ ಆಕೃತಿ, ಪೂಜಿಸಿದರೆ ಸಂಸ್ಕೃತಿ. ನೀವು ನನ್ನನ್ನು ಪೂಜಿಸಬೇಡಿ. ಈ ಕಲ್ಲನ್ನು ವಿಧಾನಸೌಧಕ್ಕೆ ಪ್ರವೇಶಿಸುವ ಮೆಟ್ಟಿಲಾಗಿ ಮಾಡಿಕೊಳ್ಳಿ.
>
> -ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

**ಒಂದು ಮತ ಹೊರ ಹೋಗಬಾರದು**

ಎಸ್‌ಐಆರ್ ಬಗ್ಗೆ ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ನಮ್ಮ ಮತ ಇದೆ ಎಂದು ಭಾವಿಸಿ ಸುಮ್ಮನಾದರೆ ಮತ ಹೋಗುತ್ತದೆ. ಮತ್ತೊಮ್ಮೆ ಎಲ್ಲರೂ ಅರ್ಜಿ ಸಲ್ಲಿಸಬೇಕು. ನೀವು ಅರ್ಜಿ ಸಲ್ಲಿಸದಿದ್ದರೆ ಮತವೂ ಇಲ್ಲ ಜೊತೆಗೆ ಸರ್ಕಾರಿ ಯೋಜನೆಗಳ ಲಾಭವೂ ಸಿಗುವುದಿಲ್ಲವೆಂದರು.

ಯಾರೂ ವ್ಯವಸಾಯ ಬಿಡಬೇಡಿ, ರೇಷ್ಮೆ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮಾಡಿಕೊಂಡಿರಿ. ನೀವು ಬೆಂಗಳೂರಿಗೆ ಹೋಗಿ ಬೀದಿಯಲ್ಲಿ ವ್ಯಾಪಾರ ಮಾಡಿಕೊಂಡು, ಅಂಗಡಿಗಳಲ್ಲಿ ಕೆಲಸ ಮಾಡಬೇಡಿ. ಇಲ್ಲೇ ಇದ್ದು ಸ್ವಾಭಿಮಾನದ ಬದುಕು ಸಾಗಿಸಿ. ಅದಕ್ಕಾಗಿ ಸಾವಿರಾರು ಎಕರೆ ಕೃಷಿ ಭೂಮಿಗೆ ನೀರು ಕಲ್ಪಿಸಲಾಗಿದೆ. ನಿಮ್ಮ ಜಮೀನನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡಬೇಡಿ. ಈ ಜಿಲ್ಲೆಗೆ ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಎಂದು ಮಾಡಿದ ನಂತರ ಇಲ್ಲಿನ ಭೂಮಿ ಬೆಲೆ ಏನಾಗಿದೆ ಎಂದು ನಿಮಗೆ ಗೊತ್ತಿದೆ. ಈ ಜಿಲ್ಲೆಯ ಹೆಸರು ಬದಲಾವಣೆ ಮಾಡುವಾಗ ಬಿಜೆಪಿ ಹಾಗು ದಳದವರು ಟೀಕೆ ಮಾಡಿದರು. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ. ಅದೇ ರೀತಿ ಅವರ ಟೀಕೆಗಳು ಸತ್ತಿವೆ. ನೀವೆಲ್ಲರೂ ಬೆಂಗಳೂರು ಜಿಲ್ಲೆಯ ಮಕ್ಕಳು ಎಂದರು.

### ಮೆಟ್ರೋದಲ್ಲಿ ಸಿ.ಎಂ. ಪ್ರಯಾಣ

ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ತವರು ಕ್ಷೇತ್ರದ ಜನರ ಭೇಟಿಗೆ ಹೊರಟ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜೀರೋ ಟ್ರಾಫಿಕ್‌ನಿಂದ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ವಿಧಾನಸೌಧದ ಬಳಿಯಿಂದ ಕನಕಪುರ ರಸ್ತೆವರೆಗೂ ಮೆಟ್ರೋ ಮೂಲಕ ಪ್ರಯಾಣ ಬೆಳೆಸಿದರು. ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರೋ ನಿಲ್ದಾಣದಲ್ಲಿ ಕೆಲಹೊತ್ತು ದಿನ ಪತ್ರಿಕೆಗಳ ಮೇಲೆ ಕಣ್ಣಾಡಿಸಿದ ಅವರು ನಂತರ ಮೆಟ್ರೋ ಪ್ರಯಾಣಿಕರಿಗೆ ಹಸ್ತಲಾಘವ ಮಾಡಿದರು. ಯುವಕ-ಯುವತಿಯರು ನಮ್ಮ ಮುಖ್ಯಮಂತ್ರಿ ಎಂದು ಹುಮ್ಮಸ್ಸಿನಿಂದ ಮಾತನಾಡಿಸಿ ಹಸ್ತಲಾಘವ ಮಾಡಿದರು. ಅನೇಕರು ಮುಖ್ಯಮಂತ್ರಿಗಳ ಜೊತೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

# ಮುಂದಿನ ಎಂಟು ದಿನ ಭಾರೀ ಮಳೆ

• ಪ್ರಜೋದಯ ವರದಿ

**ಬೆಂಗಳೂರು:** ಮುಂದಿನ 8 ದಿನ ರಾಜ್ಯದ ವಿವಿಧೆಡೆ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜೂನ್ 7ರಿಂದ 15ರ ವರೆಗೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ತಿಳಿಸಿದೆ. ಕರಾವಳಿ ಜಿಲ್ಲೆಗಳಲ್ಲಿ ಜೂನ್ 9ರ ವರೆಗೆ, ಅಲ್ಲಲ್ಲಿ ಭಾರೀ ಮಳೆಯಾಗುತ್ತದೆಂದು ಇಲಾಖೆ ತಿಳಿಸಿದೆ. ಕೋಲಾರ, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಹಗುರದಿಂದ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

ಕೋಲಾರ, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಹಗುರದಿಂದ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಜೊತೆಗೆ



ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದ್ದು, ದಕ್ಷಿಣ ಒಳನಾಡಿನ ಬಳ್ಳಾರಿ, ವಿಜಯನಗರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲೂ ಭಾರೀ ಮಳೆಯಾಗುವ ಮುನ್ಸೂಚನೆ ಇದೆ.

ಧಾರಾಕಾರ ಮಳೆ ಸೂಚನೆ ಹಿನ್ನಲೆಯಲ್ಲಿ ವಿಪತ್ತು ನಿರ್ವಹಣೆಗೆ ಆಡಳಿತ ಯಂತ್ರ ತಕ್ಷಣವೇ ಕಾರ್ಯಪ್ರವೃತ್ತರಾಗಬೇಕಿದೆ. ಮಳೆಯಿಂದಾಗಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವ, ನದಿ ಪಾತ್ರಗಳಲ್ಲಿ ಪ್ರವಾಹ ಉಂಟಾಗುವ ಹಾಗು ಗುಡ್ಡ ಕುಸಿಯುವ ಅಪಾಯವಿರುವುದರಿಂದ ಕರಾವಳಿ ಮತ್ತು ಮಲೆನಾಡು ಭಾಗದ ಜಿಲ್ಲಾಡಳಿತಗಳು ಹಾಗು ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

ಹಾಸನ ನಗರ ಸೇರಿ ಜಿಲ್ಲೆಯ ವಿವಿಧೆಡೆ ಶನಿವಾರ ಮಳೆ ಸುರಿಯಿತಾದರೂ ಭಾನುವಾರ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿತ್ತು. ಇಡೀ ದಿನ ತಂಪು ಗಾಳಿ ಬೀಸಿತು. ಸಕಲೇಶಪುರದ ಹಲವೆಡೆ ಚದುರಿದ ಮಳೆಯಾಗಿದೆ.

# ಯಗಚಿ ಹಿನ್ನೀರಿನ ಬೆಣ್ಣೂರಿಗೆ ಅಭಿವೃದ್ಧಿಯ ಸ್ಪರ್ಶ

• ಪ್ರಜೋದಯ ವರದಿ

- 40 ಲ.ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಚಾಲನೆ
- ಗಡಿ ಗ್ರಾಮಗಳ ಸಂಪರ್ಕಕ್ಕೆ ಹೊಸ ಆಶಾಕಿರಣ



**ಬೇಲೂರು :** ಯಗಚಿ ಜಲಾಶಯದ ಹಿನ್ನೀರಿನ ಪ್ರದೇಶದ ಬೆಣ್ಣೂರು ಗ್ರಾಮಕ್ಕೆ ಅಭಿವೃದ್ಧಿಯ ಹೊಸ ಅಧ್ಯಾಯ ಆರಂಭವಾಗಿದ್ದು, ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಕೆ.ಸುರೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಚಿಕ್ಕಮಗಳೂರು ಗಡಿ ಭಾಗಕ್ಕೆ ಹೊಂದಿಕೊಂಡಿರುವ ಬೆಣ್ಣೂರು ಗ್ರಾಮದ ರಸ್ತೆ ಅಭಿವೃದ್ಧಿಗೆ 40 ಲ. ರೂ. ಅನುದಾನ ಮಂಜೂರಾಗಿದ್ದು, ಎತ್ತಿನಹೊಳೆ ನೀರಾವರಿ ಯೋಜನೆಯಡಿ ಸುಸಜ್ಜಿತ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಹಿನ್ನೀರಿನ ಪ್ರದೇಶವಾಗಿರುವುದರಿಂದ ಹಾಗೂ ಗಡಿ ಭಾಗದಲ್ಲಿರುವ ಕಾರಣ ಬೆಣ್ಣೂರು ಸೇರಿ ಸುತ್ತಮುತ್ತಲಿನ ಗ್ರಾಮಗಳ ಜನರು ವರ್ಷಗಳಿಂದ ಸಂಚಾರದ ತೊಂದರೆ ಅನುಭವಿಸುತ್ತಿದ್ದರು. ಹೊಸ ರಸ್ತೆ ನಿರ್ಮಾಣದಿಂದ ವಿದ್ಯಾರ್ಥಿಗಳು, ರೈತರು, ಗ್ರಾಮಸ್ಥರ ದೈನಂದಿನ ಸಂಚಾರ ಸುಗಮವಾಗಲಿದೆ. ಗ್ರಾಮೀಣ ಭಾಗದ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮೂಲ ಸೌಕರ್ಯ ವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಹಲ್ಮಿಡಿ ಹೊಸಮನೆಹಳ್ಳಿ ನಡುವಿನ ರಸ್ತೆಯನ್ನು ರೈತರು ಪೈಪ್‌ಲೈನ್ ಅಳವಡಿಕೆಗೆ ಬಗೆದ ಪರಿಣಾಮ ರಸ್ತೆ ಹಾನಿಗೊಳಗಾಗಿದ್ದು, ಅದರ ದುರಸ್ತಿಗಾಗಿ 20 ಲ.ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಇದೇ ವಾರ ಆರಂಭವಾಗಲಿದ್ದು, ರೈತರು ಮುಂಚಿತವಾಗಿಯೇ ಪೈಪ್‌ಗಳನ್ನು ರಸ್ತೆ ಮಧ್ಯದಲ್ಲಿ ಅಳವಡಿಸಿಕೊಂಡರೆ ಮುಂದಿನ ದಿನಗಳಲ್ಲಿ ತೊಂದರೆ ತಪ್ಪುತ್ತದೆ ಎಂದು ಸಲಹೆ ನೀಡಿದರು.

ಚುನಾವಣಾ ಸಂದರ್ಭದಲ್ಲಿ ನೀಡಿದ್ದ ಭರವಸೆಯಂತೆ ಬೆಣ್ಣೂರು-ಬೇಲೂರು ಸಂಪರ್ಕಿಸುವ ಯಗಚಿ ಸೇತುವೆ ನಿರ್ಮಾಣ ಮಾಡುವ ಸಂಕಲ್ಪವನ್ನು ಪುನರುಚ್ಚರಿಸಿದ ಅವರು, ಪ್ರಸ್ತುತ ನೀರಾವರಿ ಇಲಾಖೆಯಲ್ಲಿ ಅನುದಾನದ ಕೊರತೆಯಿಂದ ಕಾಮಗಾರಿ ವಿಳಂಬವಾಗುತ್ತಿದೆ. ಅಗತ್ಯ ಅನುದಾನ ದೊರಕಿದ ತಕ್ಷಣ ಸೇತುವೆ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು. ಈ ಭಾಗದ ಜನರ ಆಶೀರ್ವಾದ ಮತ್ತು ಸಹಕಾರವೇ ನಮ್ಮ ಶಕ್ತಿ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ರೇಣುಕುಮಾರ್ ಗಡಿ ಗ್ರಾಮಗಳ ಅಭಿವೃದ್ಧಿ ಮತ್ತು ಮೂಲಸೌಕರ್ಯ ವೃದ್ಧಿಗೆ ಈ ರಸ್ತೆ ಕಾಮಗಾರಿ ಮಹತ್ವದ್ದಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇಲ್ಲದಿದ್ದರೂ ಶಾಸಕ ಹೆಚ್.ಕೆ.ಸುರೇಶ್ ತಮ್ಮ ಪ್ರಯತ್ನದಿಂದ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪ್ರಶಾಂತ್ ಮಾತನಾಡಿ, ಬೆಣ್ಣೂರು ಸೇರಿ ಹಲವು ಗ್ರಾಮಗಳು ಮುಳುಗಡೆ ಪ್ರದೇಶಗಳ ಪಟ್ಟಿಯಲ್ಲಿ ಇರುವುದರಿಂದ ನರೇಗಾ ಸೇರಿ ಹಲವು ಯೋಜನೆಗಳ ಸೌಲಭ್ಯ ಪಡೆಯಲು ತೊಂದರೆ ಉಂಟಾಗಿದೆ. ರೈತರು ತಮ್ಮ ಜಮೀನುಗಳಿಗೆ ಹೋಗುವ ರಸ್ತೆಗಳನ್ನು ದುರಸ್ತಿ ಮಾಡಿಕೊಳ್ಳಲು ಸಹ ಅನೇಕ ಅಡೆತಡೆಗಳಿವೆ ಎಂದು ಶಾಸಕರ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಗ್ರಾಮಸ್ಥರಾದ ಶಂಕರ್, ಮಲ್ಲೇಗೌಡ್ರು, ಮಾದೇವಯ್ಯ, ಮಂಜು, ಪುನೀತ್, ಜಗದೀಶ್, ಪೂರ್ಣೇಶ್ ಮಂಜುನಾಥ್, ಸುಬ್ರಮಣ್ಯ ಸೇರಿ ಇಂಜಿನೀಯರ್‌ಗಳು, ಪಿಆರ್‌ಡಿ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ನೊಣವಿನಕೆರೆ ಮಠದಲ್ಲಿ ಶಾಸಕ ಶಿವಲಿಂಗೇಗೌಡ ವಿಶೇಷ ಪೂಜೆ

## ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಸಾಥ್ | ಸಚಿವ ಸ್ಥಾನ ಸಿಗುವ ವಿಶ್ವಾಸ

• ಪ್ರಜೋದಯ ವರದಿ

**ಅರಸೀಕೆರೆ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ನೊಣವಿನಕೆರೆ ಶ್ರೀ ಕಾಡುಸಿದ್ದೇಶ್ವರ ಮಠಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಭೇಟಿ ನೀಡಿದ ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಶ್ರೀ ಗಂಗಾಧರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಶ್ರೀ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಅವರ ಆಶೀರ್ವಾದ ಪಡೆದು ಮಠದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಶಿವಲಿಂಗೇಗೌಡ ಅವರು, ಸ್ವಾಮೀಜಿ ಅವರ ದಿವ್ಯ ಆಶೀರ್ವಾದ ಪಡೆಯುವುದು ಪುಣ್ಯದ ಕಾರ್ಯ. ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಹ ಈ ಪುಣ್ಯ ಕ್ಷೇತ್ರಕ್ಕೆ ಆಗಮಿಸಿ ಆಶೀರ್ವಾದ ಪಡೆದಿರುವುದು ಮಠ ಹಾಗು ಅದರ ಪರಂಪರೆಯ ಮೇಲಿನ ಅವರ ಭಕ್ತಿ ಮತ್ತು ಗೌರವವನ್ನು ತೋರಿಸುತ್ತದೆ ಎಂದು ಹೇಳಿದರು.



ಕ್ಷೇತ್ರ ಹಾಗು ಜಿಲ್ಲೆಯ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದು, ತಮ್ಮ ಅಭಿವೃದ್ಧಿ ಕಾರ್ಯಗಳನ್ನು ಪರಿಗಣಿಸಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಚಿವ ಸಂಪುಟದಲ್ಲಿ ಅವಕಾಶ ನೀಡಲಿದ್ದಾರೆಂಬ ವಿಶ್ವಾಸವಿದೆ ಎಂದು ತಿಳಿಸಿದರು. ಬಳಿಕ ಅವರು ಮುಖ್ಯಮಂತ್ರಿ ಹಾಗು ಸ್ವಾಮೀಜಿ ಅವರೊಂದಿಗೆ ಕೆಲಕಾಲ ಮಾತುಕತೆ ನಡೆಸಿದರು ಎನ್ನಲಾಗಿದೆ.

ಇದೇ ವೇಳೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶನಿವಾರ ಸಂಜೆ ನೊಣವಿನಕೆರೆ ಕಾಡುಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿ ಸುಮಾರು ಮೂರು ಗಂಟೆಗಳ ಕಾಲ ವಿವಿಧ ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಂಡರು.

ಮಠಕ್ಕೆ ತೆರಳುವ ಮುನ್ನ ಮಲ್ಲಾಘಟ್ಟ ಕೆರೆಗೆ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ನಡೆಸಿದ ಅವರು, ಗಂಗಾಧರೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿದರು. ನಂತರ ಕೆರೆಯ ಬಳಿ ಗಂಗಾಮಾತೆಗೆ ಬಾಗಿನ ಅರ್ಪಿಸಿ ಸಂಜೆ 5.15ರ ಸುಮಾರಿಗೆ ಕಾಡುಸಿದ್ದೇಶ್ವರ ಮಠಕ್ಕೆ ಆಗಮಿಸಿದರು. ಮಠಕ್ಕೆ ಬಂದ ತಕ್ಷಣ ತೋಟದಲ್ಲಿರುವ ಗವಿ ಮಂಟಪಕ್ಕೆ ತೆರಳಿ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮಠದ ಸ್ವಾಮೀಜಿ ಅವರನ್ನು ಹೊರತುಪಡಿಸಿ ಇತರರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು.

ಪೂಜೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ, ರಾಜ್ಯದ ಜನರಿಗೆ ಒಳಿತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇನೆ. ನಾನು ಇಲ್ಲಿ ಮುಖ್ಯಮಂತ್ರಿಯಾಗಿ ಬಂದಿಲ್ಲ, ಭಕ್ತನಾಗಿ ಬಂದಿದ್ದೇನೆ. ಮೊದಲು ನಾನು ಭಕ್ತ, ನಂತರ ಮುಖ್ಯಮಂತ್ರಿ ಎಂದು ಹೇಳಿದರು.

ಕಳೆದ 24 ವರ್ಷಗಳಿಂದ ಕಾಡುಸಿದ್ದೇಶ್ವರ ಮಠಕ್ಕೆ ನಿರಂತರವಾಗಿ ಭೇಟಿ ನೀಡುತ್ತಿರುವುದಾಗಿ ತಿಳಿಸಿದ ಅವರು, ಮಠದೊಂದಿಗೆ ತಮ್ಮ ಆಧ್ಯಾತ್ಮಿಕ ನಂಟನ್ನು ಸ್ಮರಿಸಿದರು. ಮುಖ್ಯಮಂತ್ರಿಯವರ ಭೇಟಿ ಹಿನ್ನಲೆಯಲ್ಲಿ ಮಠದ ಆಡಳಿತ ಮಂಡಳಿ, ಸಿಬ್ಬಂದಿ ಹಾಗು ಭಕ್ತರು ದೇವಸ್ಥಾನ ಮತ್ತು ಗದ್ದುಗೆ ಸುತ್ತಮುತ್ತ ವಿಶೇಷ ಪೂಜೆ ಹಾಗೂ ಸ್ವಾಗತ ವ್ಯವಸ್ಥೆಗಳನ್ನು ಮಾಡಿದ್ದರು. ಭದ್ರತಾ ದೃಷ್ಟಿಯಿಂದ ಭಕ್ತರ ಪ್ರವೇಶಕ್ಕೆ ಕೆಲ ನಿರ್ಬಂಧಗಳನ್ನು ವಿಧಿಸಲಾಗಿದ್ದು, ಪೊಲೀಸ್ ಬಂದೋಬಸ್ತ್ ಕೂಡ ಕಲ್ಪಿಸಲಾಗಿತ್ತು.

# ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ : ಸವಾರ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿಯಾಗಿ ಸವಾರ ಸ್ಥಳದಲ್ಲೇ ಮೃತಪಟ್ಟು ಮತ್ತೊಬ್ಬರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಆನೆಕೆರೆ ಮಲ್ಲಪ್ಪನ ಬೆಟ್ಟ ರಸ್ತೆಯಲ್ಲಿ ನಡೆದಿದೆ.

ಹೊಳೆನರಸೀಪುರ ತಾಲ್ಲೂಕು ಲಕ್ಷ್ಮೀಪುರ ಗ್ರಾಮದ ಜಯಣ್ಣ (55) ಮೃತರು. ದಿನಸಿ ಸಾಮಾಗ್ರಿ ತರಲು ಪಟ್ಟಣಕ್ಕೆ ತೆರಳಿದ್ದ ಅವರು ಶನಿವಾರ ರಾತ್ರಿ 9ರ ಸಮಯದಲ್ಲಿ ಸ್ವಾಮಿಗೌಡ ಎಂಬುವವರನ್ನು ಕೂರಿಸಿಕೊಂಡು ಬರುತ್ತಿದ್ದರು. ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ಸ್ವಾಮಿಗೌಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಠಗಳ ಅಭಿವೃದ್ಧಿಗೆ ಭಕ್ತರ ಸಹಕಾರ ಅಗತ್ಯ

• ಪ್ರಜೋದಯ ವರದಿ

**ಹಾಸನ:** ಮಠ ಮಾನ್ಯಗಳು ಬೆಳೆಯಬೇಕಾದರೆ ಭಕ್ತರ ಸಹಾಯ ಅತ್ಯವಶ್ಯಕವಾಗಿದೆ ಎಂದು ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಹೇಳಿದರು.

ಮಠದಲ್ಲಿ ಭಾನುವಾರ ನಡೆದ ಭಕ್ತರ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಡೆದ ಮಠದ ಹಿರಿಯ ಸ್ವಾಮೀಜಿಗಳಾದ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ ಸ್ಮರಣೋತ್ಸವ, ದಾಸೋಹ ಭವನ ಉದ್ಘಾಟನಾ ಸಮಾರಂಭ ಎಲ್ಲರ ನೆರವಿನಿಂದ ಯಶಸ್ವಿಯಾಗಿದೆ. ಕಾರ್ಯಕ್ರಮ ನಡೆಯಲು ಧನಸಹಾಯ ಮಾಡಿದ ಭಕ್ತರಿಗೆ ಕೃತಜ್ಞತೆ ಸಲ್ಲಿಸಿದರು.

ಸಭೆಯಲ್ಲಿ ತಣ್ಣೀರುಹಳ್ಳ ಮಠದ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ.ಪಿ.ಐಸಾಮಿಗೌಡ, ಕಾರ್ಯದರ್ಶಿ ಬಿ.ಎಸ್.ಕಾಂತರಾಜು, ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸೋಮಣ್ಣ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಜಿಲ್ಲಾ ಉಪಾಧ್ಯಕ್ಷೆ ಗೀತಾ ಪುಟ್ಟಸ್ವಾಮಿ, ಹಳೆಯ ವಿದ್ಯಾರ್ಥಿಗಳ ಸಂಘದ ಮಲ್ಲಿಕಾರ್ಜುನ, ಸಂಗಮೇಶಯ್ಯ ಮತ್ತಿತರರಿದ್ದರು.



## ಪ್ರವಾಸಿಗರ ಸಂಖ್ಯೆ ಕ್ಷೀಣ | ಸ್ಥಳೀಯ ವ್ಯಾಪಾರಿಗಳಿಗೆ ಹೊಡೆತ

# ಪ್ರವಾಸೋದ್ಯಮ ಉತ್ತೇಜನಕ್ಕೆ ಜಿಲ್ಲಾಡಳಿತ ನಿರ್ಲಕ್ಷ್ಯ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪ್ರವಾಸೋದ್ಯಮ ಉತ್ತೇಜನಕ್ಕೆ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ಕೇವಲ ಕಾಗದದಲ್ಲೇ ಉಳಿದಿರುವ ಪರಿಣಾಮ ಪ್ರವಾಸಿಗರು ಹಾಗು ಸ್ಥಳೀಯರು ತೀವ್ರ ನಿರಾಸೆ ಅನುಭವಿಸುವಂತಾಗಿದೆ.

ಮಳೆಗಾಲ ಆರಂಭವಾಗಿರುವ ಹಿನ್ನಲೆಯಲ್ಲಿ ಸಕಲೇಶಪುರ ತಾಲ್ಲೂಕಿನ ಪಶ್ಚಿಮ ಘಟ್ಟಗಳ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಆದರೆ ಚಾರಣಕ್ಕೆ ಬರುವವರಿಗೆ ಎಲ್ಲಿಯೂ ಮುಕ್ತ ಅವಕಾಶ ಕಲ್ಪಿಸಿಲ್ಲ. ಪಟ್ಲ ಬೆಟ್ಟ, ಗವಿ ಬೆಟ್ಟ, ಹೊಸಳ್ಳಿ ಬೆಟ್ಟ, ಮೂರ್ಕಣ್ಣು ಗುಡ್ಡ ಸೇರಿ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ನಿಷೇಧ ಹೇರಲಾಗಿದೆ. ಚಾರಣ ಸ್ಥಳಗಳಲ್ಲಿ ಆನ್‌ಲೈನ್ ಟಿಕೆಟ್ ವ್ಯವಸ್ಥೆ, ಅರಣ್ಯ ಹಾಗು ಕಂದಾಯ ಇಲಾಖೆಯಿಂದಲೇ ವಾಹನ ವ್ಯವಸ್ಥೆ ಮಾಡುವ ಭರವಸೆಯನ್ನು ಜಿಲ್ಲಾಡಳಿತ ನೀಡಿತ್ತು. ಈ ಸಂಬಂಧ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಸಭೆಗಳನ್ನು ನಡೆಸಿದ್ದರು. ಆದರೆ ಯಾವುದು ಕಾರ್ಯರೂಪಕ್ಕೆ ಬಾರದಿರುವ ಹಿನ್ನಲೆಯಲ್ಲಿ ಪ್ರವಾಸಿಗರ ಸಂಖ್ಯೆ ಗಣನೀಯ ಇಳಿಕೆಯಾಗಿದೆ. ನಾಲ್ಕೈದು ಕಿ.ಮೀ. ಕಾಲ್ನಡಿಗೆಯಲ್ಲಿ ಹೋಗಲು ಆಗದ ಪ್ರವಾಸಿಗರು ಸುಂದರ ತಾಣಗಳನ್ನು ನೋಡುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಇದು ಸ್ಥಳೀಯ ಪ್ರವಾಸೋದ್ಯಮ ಬೆಳವಣಿಗೆ ಮೇಲೆ ಭಾರೀ ಪರಿಣಾಮ ಬೀರಿದೆ. ರಾಷ್ಟ್ರೀಯ ಹೆದ್ದಾರಿ 75ರ ಕಾಮಗಾರಿ ಹಿನ್ನಲೆಯಲ್ಲಿ ಮಂಜ್ರಾಬಾದ್ ಕೋಟೆ ವೀಕ್ಷಣೆಗೂ ಜನರ ಸಂಖ್ಯೆ ಕಡಿಮೆಯಾಗಿದೆ.



-ಮಲ್ಲಿಕಾರ್ಜುನ್ ಕೊಚ್ಚರಗಿ

**ಪಟ್ಲ ಬೆಟ್ಟದಲ್ಲಿ ಪ್ರವಾಸಿಗರ ಸಂಖ್ಯೆ ಕುಸಿತ**

ಸೌಂದರ್ಯದ ಕಣಜ ಎಂದೇ ಖ್ಯಾತಿ ಪಡೆದಿರುವ ಪಟ್ಲ ಬೆಟ್ಟಕ್ಕೆ ಪ್ರತಿವರ್ಷ ಇಷ್ಟೊತ್ತಿಗೆ ಪ್ರವಾಸಿಗರು ವಿಪರೀತ ಸಂಖ್ಯೆಯಲ್ಲಿ ಬರುತ್ತಿದ್ದರು. ಚಲಿಸುವ ಮೋಡಗಳು, ಆಹ್ಲಾದಕರ ಗಾಳಿ, ದೂರದಿಂದ ನುಣ್ಣಗೆ ಕಾಣಿಸುವ ಜಲಪಾತ, ಹಸಿರು ಪ್ರದೇಶ ನೋಡುವುದೇ ಕಣ್ಣಿಗೆ ಹಬ್ಬ. ಮಳೆಗಾಲಕ್ಕೆ ತಮಿಳುನಾಡಿನ ಊಟಿ ಅನುಭವ ನೀಡುವ ಪಟ್ಲ ಬೆಟ್ಟ ಪ್ರವಾಸಿಗರ ಅಚ್ಚುಮೆಚ್ಚಿನ ತಾಣ. ಹಾಸನ ಮಾತ್ರವಲ್ಲದೆ ಬೆಂಗಳೂರು, ಮಂಗಳೂರು ಸೇರಿ ವಿವಿಧ ಜಿಲ್ಲೆಯಿಂದ ಸಾರ್ವಜನಿಕರು ಅಲ್ಲಿಗೆ ಬರುತ್ತಿದ್ದರು. ಆದರೆ ಕಳೆದ ಕೆಲವು ವರ್ಷಗಳಿಂದ ಅಲ್ಲಿ ವಾಹನ ಓಡಾಟ ನಿಷೇಧಿಸಲಾಗಿದೆ. ಬೈಕ್‌ಗಳು ತೆರಳದಂತೆ ಗೇಟ್ ಹಾಕಿ ಸುತ್ತಲೂ ತಂತಿ ಬೇಲಿ ಹಾಕಿರುವುದರಿಂದ ಹೋಗುವುದು ಅಸಾಧ್ಯವಾಗಿದೆ. ಜೊತೆಗೆ ಸೂಕ್ತ ರಕ್ಷಣೆಯೂ ಇಲ್ಲದಿರುವುದರಿಂದ ಪ್ರವಾಸಿಗರು ಪಟ್ಲ ಬೆಟ್ಟದತ್ತ ಬರುತ್ತಿಲ್ಲ. ಪ್ರವಾಸಿಗರನ್ನೇ ನಂಬಿಕೊಂಡಿದ್ದ ಸ್ಥಳೀಯ ವ್ಯಾಪಾರಿಗಳು ಸಹ ಈ ಬಾರಿ ನಷ್ಟ ಅನುಭವಿಸುವಂತಾಗಿದೆ.

### ವ್ಯಾಪಾರ ವಹಿವಾಟು ಸ್ತಬ್ಧ : ಸಮಸ್ಯೆ

ಪಶ್ಚಿಮಘಟ್ಟದ ಸಾಲು ಹೊತ್ತಿರುವ ಸಕಲೇಶಪುರ ಪ್ರವಾಸೋದ್ಯಮಕ್ಕೆ ಹೆಸರಾದ ಊರು. ಕಾಡಾನೆ ಹಾವಳಿ ಹಾಗು ನಿರಂತರ ಮಳೆಯಿಂದ ಜನರ ಆದಾಯವು ಅಷ್ಟಕ್ಕಷ್ಟೇ ಎಂಬಂತಾಗಿದೆ. ಇನ್ನು ಪ್ರವಾಸಿ ತಾಣಗಳ ಸುತ್ತಲಿನ ಜನರು ವ್ಯಾಪಾರ ವಹಿವಾಟು ನಂಬಿ ಬದುಕುತ್ತಿದ್ದಾರೆ. ಆದರೆ ಪ್ರೇಕ್ಷಣೀಯ ಸ್ಥಳಗಳಲ್ಲಿ ಜಿಲ್ಲಾಡಳಿತ ನಿಷೇಧ ಹೇರಿರುವುದರಿಂದ ಭಾರೀ ಸಮಸ್ಯೆಯಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ.

> ಪಟ್ಲ ಬೆಟ್ಟ ವೀಕ್ಷಣೆಗೆ ಪ್ರವಾಸಿಗರು ಬರುತ್ತಾರೆಯಾದರೂ ಜೀಪ್ ವ್ಯವಸ್ಥೆ ಇಲ್ಲವೆಂಬುದನ್ನು ತಿಳಿದು ವಾಪಾಸ್ ಹೋಗುತ್ತಾರೆ. ಜಿಲ್ಲಾಡಳಿತ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಸ್ಥಳೀಯರ ಸಹಕಾರ ಪಡೆದು ವಾಹನ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.
>
> -ವಿಜಯಕುಮಾರ್, ಸ್ಥಳೀಯ ನಿವಾಸಿ

**ಬೆಟ್ಟದ ಭೈರವೇಶ್ವರದಲ್ಲೂ ಅದೇ ಸ್ಥಿತಿ**

ಐತಿಹಾಸಿಕ ಬೆಟ್ಟದ ಭೈರವೇಶ್ವರ ದೇವಸ್ಥಾನ ಮಳೆಗಾಲದಲ್ಲಿ ಜನರಿಂದ ತುಂಬಿ ತುಳುಕುತ್ತಿದ್ದ ಪ್ರದೇಶ. ಆದರೆ ಕೆಲ ತಿಂಗಳ ಹಿಂದೆ ಛಾಯಾಗ್ರಾಹಕರು ಹಾಗು ಸ್ಥಳೀಯರ ನಡುವೆ ಗಲಾಟೆ ನಡೆದ ಬಳಿಕ ಅಲ್ಲಿಗೆ ಜನರ ಬರುವಿಕೆ ತೀರಾ ಕಡಿಮೆಯಾಗಿದೆ. ಫೋಟೋ ಕ್ಲಿಕ್ಕಿಸಿಕೊಂಡರೆ ಜಗಳ ಮಾಡುತ್ತಾರೆಂಬ ಭಯ ಜನರಲ್ಲಿ ಮೂಡಿದೆ. ಜೊತೆಗೆ ಫೋಟೋ ಶೂಟ್‌ಗೆ ಜಿಲ್ಲಾಡಳಿತ ಶುಲ್ಕ ನಿಗದಿಪಡಿಸಿರುವುದು ಆತಂಕಕ್ಕೆ ಕಾರಣವಾಗಿದೆ.

# ಇದೇನಾ ಅಚ್ಛೇದಿನ್ : ಖಂಡ್ರೆ ಆಕ್ರೋಶ

• ಪ್ರಜೋದಯ ವರದಿ

**ಬೆಂಗಳೂರು :** ಗೃಹ ಬಳಕೆಯ 14.2 ಕೆ.ಜಿ. ಅಡುಗೆ ಅನಿಲ ಸಿಲಿಂಡರ್ ದರವನ್ನು 29 ರೂ. ಏರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ, ಅಡ್ಡ ಇದೇನಾ ಅಚ್ಛೇದಿನ್ ಎಂದು ಪ್ರಶ್ನಿಸಿದ್ದಾರೆ.

ಕಳೆದ 3 ತಿಂಗಳಲ್ಲಿ 2ನೇ ಬಾರಿ ಬಳಸುವ ಅಡುಗೆ ಅನಿಲ ದರ ಏರಿಕೆ ಮಾಡಲಾಗಿದ್ದು, ಸುಮಾರು 90 ರೂ. ಹೊರೆ ಬಿದ್ದಿದೆ. ಇದರಿಂದ ಬಡವರು, ಮಧ್ಯಮ ವರ್ಗದವರು ನಲುಗಿ ಹೋಗಿದ್ದಾರೆ. ಇದೆಲ್ಲವೂ ಕೇಂದ್ರ ಸರ್ಕಾರದ ದುರಾಡಳಿತದ ಫಲವೆಂದು ಅವರು ಹೇಳಿದ್ದಾರೆ.

# ಆರು ಐಎಎಸ್ ಅಧಿಕಾರಿಗಳ ವರ್ಗಾವಣೆ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದ ಆರು ಐಎಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗ ಮಾಡಿ ಆದೇಶ ಹೊರಡಿಸಿದೆ.


ಮುಖ್ಯಮಂತ್ರಿಗಳ ಕಾರ್ಯಕ್ರಮ ಹಾಗು ಯೋಜನೆ ಅನುಷ್ಠಾನ ಪ್ರಧಾನ ಕಾರ್ಯದರ್ಶಿಯಾಗಿ ಮುನೀಶ್ ಮೌದ್ಗಿಲ್ ಅವರನ್ನು ನೇಮಕ ಮಾಡಲಾಗಿದೆ. ಈವರೆಗೂ ಅವರು ಜಿಬಿಎ ಆಡಳಿತ, ಆದಾಯ ಹಾಗು ಐಟಿ ವಿಭಾಗದ ವಿಶೇಷ ಆಯುಕ್ತರಾಗಿದ್ದರು. ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಅಂಜುಂ ಪರ್ವೇಜ್ ಅವರನ್ನು ಅರಣ್ಯ, ಪರಿಸರ ಹಾಗು ಜೀವಿ ಶಾಸ್ತ್ರ ಇಲಾಖೆ ಹೆಚ್ಚುವರಿ ಕಾರ್ಯದರ್ಶಿಯಾಗಿ ಮುಂದುವರಿಸಲಾಗಿದೆ. ಮುಖ್ಯಮಂತ್ರಿ ಕಾರ್ಯದರ್ಶಿಯಾಗಿದ್ದ ಬಿ.ಬಿ.ಕಾವೇರಿ ಅವರನ್ನು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗ ಮಾಡಲಾಗಿದೆ. ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯಾಗಿದ್ದ ದೀಪಾ ಚೋಳನ್ ಸಾರಿಗೆ ಇಲಾಖೆ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಯೋಜನೆ, ಸಾಂಖ್ಯಿಕ ಇಲಾಖೆ ಕಾರ್ಯದರ್ಶಿಯಾಗಿದ್ದ ಡಾ.ಎಂ.ವಿ.ವೆಂಕಟೇಶ್ ಅವರನ್ನು ಸಹಕಾರ ಇಲಾಖೆಗಳ ನಿಬಂಧಕರ ಹುದ್ದೆಗೆ ವರ್ಗಾಯಿಸಲಾಗಿದೆ. ಸಾರಿಗೆ ಇಲಾಖೆ ಆಯುಕ್ತರಾಗಿ ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಸೆಲ್ವಮಣಿ ಅವರನ್ನು ನಿಯೋಜಿಸಲಾಗಿದೆ. ಸಾರಿಗೆ ಇಲಾಖೆ ಆಯುಕ್ತರಾಗಿದ್ದ ಎ.ಎಂ.ಯೋಗೀಶ್ ಅವರನ್ನು ವರ್ಗ ಮಾಡಲಾಗಿದ್ದು, ಯಾವುದೇ ಹುದ್ದೆ ತೋರಿಸಿಲ್ಲ.

# ಭಾವ ಲಹರಿ

## ತಾಯಿ ಜತೆ ತಾಲೀಮು ಸಲ್ಲ

> ತಾಯಿಯ ಎದುರು ಸತತವಾಗಿ ಗೆಲ್ಲುವುದು ಮಗುವಿಗೆ ಸುಳ್ಳು ಆತ್ಮವಿಶ್ವಾಸವನ್ನು ನೀಡಬಹುದು. ಇದು ಅಸಲಿ ಸ್ಪರ್ಧೆಗೆ ಬಂದಾಗ ಅಪಾಯಕಾರಿಯಾಗಬಹುದು. ತಾಯಿ ಮಗುವಿಗೆ ಜೀವನದ ಮೌಲ್ಯಗಳನ್ನು ಕಲಿಸಬಲ್ಲಳೇ ಹೊರತು, ಜಗತ್ತಿನ ಕ್ರೂರ ಸ್ಪರ್ಧೆಯ ತಂತ್ರಗಳನ್ನು ಕಲಿಸಲು ಆಕೆ ಅರ್ಹಳಲ್ಲ.

ಸಂಪಾದಕರ ಸದ್ಯಶೋಧನೆ ತಾಯಿಯ ಜತೆ ಯಾವುದೇ ಆಟವನ್ನು ಅಭ್ಯಾಸ ಮಾಡಬಾರದಂತೆ, ಏಕೆಂದರೆ ಆಕೆ ಮಗ ಅಥವಾ ಮಗಳು ಸೋಲುವುದನ್ನು ಎಂದಿಗೂ ಸಹಿಸುವುದಿಲ್ಲವಂತೆ ಎಂಬ ಈ ಮಾತಿದೆ. ಜಗತ್ತಿನ ಯಾವುದೇ ಸ್ಪರ್ಧೆಯಲ್ಲಿ ಇಬ್ಬರು ವ್ಯಕ್ತಿಗಳು ಮುಖಾಮುಖಿಯಾದಾಗ ಅಲ್ಲಿ



ಗೆಲ್ಲುವ ಹಂಬಲ ವಿರುತ್ತದೆ. ಆದರೆ ತಾಯಿ ಮತ್ತು ಮಗ/ ಮಗಳ ನಡುವಿನ ಸಂಬಂಧವೇ ಬೇರೆ.

ಇಲ್ಲಿ ತಾಯಿ ತನ್ನ ಮಗುವಿನ ಎದುರಾಳಿಯಾಗಲು ಸಾಧ್ಯವೇ ಇಲ್ಲ. ಆಕೆಯ ಜತೆ ಆಟವಾಡಲು ಹೋದಾಗ, ಆಕೆ ಆಟದ ನಿಯಮಗಳಿಗಿಂತ ಹೆಚ್ಚಾಗಿ ಮಗ/ಮಗಳ ಮುಖದ ಮೇಲಿನ ಸಂತೋಷಕ್ಕೆ ಹೆಚ್ಚು ಪ್ರಾಮುಖ್ಯ ನೀಡುತ್ತಾಳೆ. ಮಗ/ಮಗಳು ಗೆದ್ದಾಗ ಅವರ ಕಣ್ಣಲ್ಲಿ ಮಿಂಚುವ ಸಂಭ್ರಮ ಆಕೆಗೆ ತನ್ನ ಗೆಲುವಿಗಿಂತ ನೂರು ಪಟ್ಟು ಹೆಚ್ಚು ತೃಪ್ತಿ ನೀಡುತ್ತದೆ. ಹಾಗಾಗಿ, ಆಕೆ ಉದ್ದೇಶಪೂರ್ವಕವಾಗಿಯೇ ಸೋಲುತ್ತಾಳೆ. ಇದು ಆಟದ ಕೌಶಲವನ್ನು ಬೆಳೆಸುವ ಬದಲು, ಕೇವಲ ಮಮತೆಯನ್ನು ಪೋಷಿಸುತ್ತದೆ. ತಾಯಿ ಮಗುವಿನ ಮೊದಲ ರಕ್ಷಕಿ. ಜಗತ್ತು ಏಟು ನೀಡಿದಾಗ, ಸೋಲು ಉಣಿಸಿದಾಗ ಮಕ್ಕಳಿಗೆ ಆಸರೆಯಾಗುವವಳು ಆಕೆ. ಇಂಥ ಪರಿಸ್ಥಿತಿಯಲ್ಲಿ ಆಕೆಯೇ ಮಕ್ಕಳಿಗೆ ಸೋಲುಣಿಸುವುದು ಅಸಾಧ್ಯವಾದ ಮಾತು.

ಜೀವನದ ಯಾವುದೇ ಹಂತದಲ್ಲಿ ಮಕ್ಕಳು ಸೋತು ಬಾಡಿದರೆ ಆಕೆ ಅತೀವವಾಗಿ ನೊಂದು ಕೊಳ್ಳುತ್ತಾಳೆ. ಆಟದ ಮೈದಾನದಲ್ಲಿ ಮಕ್ಕಳು ತಪ್ಪು ಮಾಡಿದಾಗ ಅದನ್ನು ತಿದ್ದಿ, ಶಿಕ್ಷೆ ನೀಡಿ ಆಟದ ನಿಯಮ ಕಲಿಸುವ ಕಟ್ಟುನಿಟ್ಟಿನ ಎದುರಾಳಿಯಾಗಲು ಆಕೆಗೆ ಮನಸ್ಸು ಬರುವುದಿಲ್ಲ.

ಆಕೆಯ ದೃಷ್ಟಿಯಲ್ಲಿ ಮಕ್ಕಳು ಸದಾ ವಿಜೇತನಾಗಿಯೇ ಇರಬೇಕು. ಪ್ರಾಕ್ಟೀಸ್ ಅಥವಾ ಅಭ್ಯಾಸದ ಮುಖ್ಯ ಉದ್ದೇಶವೇ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದು ಮತ್ತು ಎದುರಾಳಿಯ ಸವಾಲುಗಳನ್ನು ಎದುರಿಸಲು ಸಜ್ಜಾಗುವುದು.

ಮಗು ಗೆಲ್ಲಲಿ ಎಂಬ ಕಾರಣಕ್ಕೆ ಆಕೆ ತನ್ನ ಆಟವನ್ನು ಬಿಟ್ಟುಕೊಡುತ್ತಾಳೆ. ಇದರಿಂದ ಮಗುವಿಗೆ ತನ್ನ ನೈಜ ಸಾಮರ್ಥ್ಯದ ಅರಿವಾಗುವುದಿಲ್ಲ. ಮಗು ತಪ್ಪು ಮಾಡಿದಾಗ ಆಕೆ ಅದನ್ನು ಪ್ರೀತಿಯಿಂದ ಕ್ಷಮಿಸುತ್ತಾಳೆ. ಆದರೆ ಹೊರಗಿನ ಜಗತ್ತು ಅಥವಾ ಅಸಲಿ ಎದುರಾಳಿ ಮಗುವಿನ ತಪ್ಪನ್ನೇ ಬಂಡವಾಳ ಮಾಡಿಕೊಳ್ಳುತ್ತಾರೆ.

ತಾಯಿಯ ಎದುರು ಸತತವಾಗಿ ಗೆಲ್ಲುವುದು ಮಗುವಿಗೆ ಸುಳ್ಳು ಆತ್ಮವಿಶ್ವಾಸವನ್ನು ನೀಡಬಹುದು. ಇದು ಅಸಲಿ ಸ್ಪರ್ಧೆಗೆ ಬಂದಾಗ ಅಪಾಯಕಾರಿಯಾಗಬಹುದು. ತಾಯಿ ಮಗುವಿಗೆ ಜೀವನದ ಮೌಲ್ಯಗಳನ್ನು ಕಲಿಸಬಲ್ಲಳೇ ಹೊರತು, ಜಗತ್ತಿನ ಕ್ರೂರ ಸ್ಪರ್ಧೆಯ ತಂತ್ರಗಳನ್ನು ಕಲಿಸಲು ಆಕೆ ಅರ್ಹಳಲ್ಲ.


ಏಕೆಂದರೆ ಆಕೆಯ ಹೃದಯದಲ್ಲಿ ತಂತ್ರಗಳಿಲ್ಲ, ಕೇವಲ ಮಮತೆ ಇದೆ. ಆಕೆ ಮಗುವಿಗೆ ಸಂಸ್ಕಾರ ನೀಡುತ್ತಾಳೆ, ಸೋತಾಗ ಬೆನ್ನು ಸವರುತ್ತಾಳೆ, ಹಸಿದಾಗ ಉಣಿಸುತ್ತಾಳೆ. ಆದರೆ ಮಗುವನ್ನು ಸೋಲಿಸಿ, ಆ ಮೂಲಕ ಬಲಿಷ್ಠಗೊಳಿಸುವ ಕೆಲಸ ಆಕೆಯಿಂದ ಸಾಧ್ಯವಿಲ್ಲ. ಆಕೆಗೆ ತನ್ನ ಮಗುವಿನ ಗೆಲುವು ಒಂದು ಹಬ್ಬವಿದ್ದಂತೆ.

ಒಬ್ಬ ಗುರು ಅಥವಾ ಕೋಚ್ ಮಗುವನ್ನು ಸೋಲಿಸಿ ಅದರ ಮಿತಿಗಳನ್ನು ಪರಿಚಯಿಸುತ್ತಾನೆ. ಆದರೆ ತಾಯಿ ಮಗುವಿನ ಮಿತಿಗಳನ್ನು ತನ್ನ ಪ್ರೀತಿಯಿಂದ ಮುಚ್ಚಿಡುತ್ತಾಳೆ. ಹಾಗಾಗಿ, ಹೊರಗಿನ ಜಗತ್ತಿನೊಂದಿಗೆ ಹೋರಾಡಲು ಬೇಕಾದ ತಾಲೀಮನ್ನು ಹೊರಗಿನವರೊಂದಿಗೇ ಮಾಡಬೇಕು.

ತಾಯಿಯ ಮಡಿಲು ವಿಶ್ರಾಂತಿಗಿರಬೇಕೇ ಹೊರತು, ಯುದ್ಧದ ಅಭ್ಯಾಸಕ್ಕಲ್ಲ. ತಾಯಿಯ ಎದುರು ಆಟವಾಡಬೇಡ ಎನ್ನುವುದರ ಅರ್ಥ ಆಕೆಯನ್ನು ದೂರವಿಡು ಎಂದಲ್ಲ. ಬದಲಿಗೆ, ಆಕೆಯ ಪ್ರೀತಿಯನ್ನು ಸ್ಪರ್ಧೆಯ ಅಳತೆಗೋಲಿನಿಂದ ಅಳೆಯಬೇಡ ಎಂದರ್ಥ. ಆಕೆ ಮಗುವಿನ ಗೆಲ್ಲಿಸುವುದಕ್ಕಾಗಿಯೇ ಹುಟ್ಟಿದವಳು.

ಮಗುವನ್ನು ಸೋಲಿಸುವ ಶಕ್ತಿ ಆಕೆಗೆ ಇಲ್ಲ. ಆಕೆಯ ಪ್ರೀತಿಯೇ ಮಗುವಿನ ದೊಡ್ಡ ಗೆಲುವು. ಜೀವನದ ಕಠಿಣ ಹಾದಿಯಲ್ಲಿ ನಡೆಯಲು ಬೇಕಾದ ಶಕ್ತಿಯನ್ನು ಆಕೆಯ ಆಶೀರ್ವಾದದಲ್ಲಿ ಹುಡುಕಬೇಕೇ ಹೊರತು, ಆಕೆಯೊಂದಿಗಿನ ಪೈಪೋಟಿಯಲ್ಲಲ್ಲ. ತಾಯಿ ಮಗುವಿನ ಗೆಲುವಿನ ದಾರಿಯನ್ನು ತೋರಿಸುವ ದೀಪವೇ ಹೊರತು, ಆ ಹಾದಿಯಲ್ಲಿ ಅಡೆತಡೆಯಾಗುವ ಎದುರಾಳಿಯಲ್ಲ. ಆಕೆಯ ಪ್ರೀತಿ ಮಗುವನ್ನು ಅಸಲಿಗೆ ಸೋಲಿನಿಂದ ರಕ್ಷಿಸುತ್ತದೆ, ಆದರೆ ಆಟದ ಮೈದಾನದ ಸೋಲಿನಿಂದ ಮಗುವೇ ಕಲಿಯಬೇಕಾಗುತ್ತದೆ.

**– ವಿಶ್ವೇಶ್ವರ** ಭಟ್



## ಜೀವ ವಿಕಸನಕ್ಕೆ ನೋವು ಬೇಕೇ ಬೇಕು!

> **» ಹಠ ಹಿಡಿದು ಹೊಯ್ಯುವ ಮಳೆ. ಇಲ್ಲಿ ಮಳೆಗಾಲದಲ್ಲಿ ಸ್ವಲ್ಪ ಒಳನಾಡು, ಅರೆ ಮಲೆನಾಡಿನಲ್ಲಿ ಉಂಬುಳದ (ಲೀಚ್/ ಜವಳೆ) ಕಾಟ ಅತಿ ಹೆಚ್ಚು. ಸ್ವಚ್ಛವಾದ ನೀರಿನ ತೊರೆಯಿದೆಯೆಂದು ಸ್ನಾನಕ್ಕೆ, ಅಥವಾ ಕಾಲದ್ದಿದರೆ ಒಂದೆರಡು ನಿಮಿಷದಲ್ಲಿ ಅದೆಲ್ಲಿಂದಲೋ ಅರಿವಿಗೇ ಬಾರದಂತೆ ಮೈ ಮೇಲೆ, ಕೈ ಕಾಲುಗಳ ಸಂಧಿಯಲ್ಲಿ ಅಂಟಿಕೊಂಡು ನಯವಾಗಿ ರಕ್ತ ಹೀರುತ್ತವೆ.**

ಉತ್ತರ ಕನ್ನಡವೆಂದರೆ ಅದೊಂದು ವಿಶೇಷ ಜಿಲ್ಲೆ. ಪ್ರಾಣಿ ಸಂಕುಲ ವೈವಿಧ್ಯ ಈ ಜಿಲ್ಲೆಯಲ್ಲಿದ್ದಷ್ಟು ಕರ್ನಾಟಕದ ಬೇರಾವ ಜಿಲ್ಲೆಯಲ್ಲಿಯೂ ಇಲ್ಲವೆಂದರೆ ಅತಿಶಯವಾಗಲಿಕ್ಕಿಲ್ಲ. ಕಾರಣ ಇಷ್ಟೆ – ಇಲ್ಲಿ ಕರಾವಳಿ, ಮಲೆನಾಡು, ಬಯಲುಸೀಮೆ ಹೀಗೆ ನಾನಾ ವೆರೈಟಿಗಳು ಒಂದೇ ಜಿಲ್ಲೆಯಲ್ಲಿದೆ. ಪಶ್ಚಿಮ ಘಟ್ಟವಿದೆ, ಅತಿ ಹೆಚ್ಚು ಕಾಡು ಇಲ್ಲಿದೆ. ಕುಮಟಾದ ಹತ್ತಿರದ ನಮ್ಮ ಊರಿನ ಮನೆಯ ತಾರಸಿಯ ಮೇಲೆ ನಿಂತರೆ ಆರೆಂಟು ಕಿಲೋಮೀಟರ್ ದೂರದ ಸಮುದ್ರದ ಭೋರ್ಗರೆತ ಕೇಳಿಸುತ್ತದೆ.

ಹುಣ್ಣಿಮೆ ಬಂತೆಂದರೆ ಕಡಲಬ್ಬರ ಜಾಸ್ತಿ. ಮನೆಯ ಹಿತ್ತಲಿಂದ ಹಿಂದಕ್ಕೆಲ್ಲ ಮುಗಿಲು ಚುಂಬಿಸುವ ಪಶ್ಚಿಮ ಘಟ್ಟ. ಒಂದುಕಡೆ ಸಹ್ಯಾದ್ರಿ, ಒಂದು ಕಡೆ ಕಡಲು. ನಮ್ಮೂರಿಂದ ಸ್ವಲ್ಪ ಉತ್ತರಕ್ಕೆ ಹೋದರೆ ಯಾಣ, ಅಂಕೋಲಾ, ಗೋಕರ್ಣ ಇತ್ಯಾದಿ. ಅಂಕೋಲಾ ಮೊದಲಾದಲ್ಲಿ ಪಶ್ಚಿಮಘಟ್ಟ ಮತ್ತು ಕರಾವಳಿಯ ಮಧ್ಯೆ ಸ್ವಲ್ಪ ಬಯಲಿನ ಅಂತರವಿದೆ.

ನಮ್ಮಲ್ಲಿನ ಕೆಲವು ಊರುಗಳು ಥೇಟ್ ತೇಜಸ್ವಿಯವರ ಜುಗಾರಿ ಕ್ರಾಸಿನಲ್ಲಿ ಬರುವ ಊರಿನಂತೆ. ಎತ್ತೆತ್ತರದ ಗುಡ್ಡ, ಮಳೆಗಾಲ ಬಂತೆಂದರೆ ಕವಿದ ಮೋಡಗಳಿಗೆ ತಾವು ಸರಿದು ಸೂರ್ಯನಿಗೆ ದಾರಿ ಮಾಡಿಕೊಡಬೇಕೆಂಬ ಸೌಜನ್ಯವಿಲ್ಲ. ಕಾರ್ಮೋಡದ ಜಾಪಿನ ಮುಂದೆ ಕೆಲವೊಮ್ಮೆ ವಾರಗಟ್ಟಲೆ ಸೂರ್ಯನ ಅಡ್ರೆಸ್ಸೆ ಇರುವುದಿಲ್ಲ.

ಹಠ ಹಿಡಿದು ಹೊಯ್ಯುವ ಮಳೆ. ಇಲ್ಲಿ ಮಳೆಗಾಲದಲ್ಲಿ ಸ್ವಲ್ಪ ಒಳನಾಡು, ಅರೆ ಮಲೆನಾಡಿನಲ್ಲಿ ಉಂಬುಳದ (ಲೀಚ್/ ಜವಳೆ) ಕಾಟ ಅತಿ ಹೆಚ್ಚು. ಸ್ವಚ್ಛವಾದ ನೀರಿನ ತೊರೆಯಿದೆಯೆಂದು ಸ್ನಾನಕ್ಕೆ, ಅಥವಾ ಕಾಲದ್ದಿದರೆ ಒಂದೆರಡು ನಿಮಿಷದಲ್ಲಿ ಅದೆಲ್ಲಿಂದಲೋ ಅರಿವಿಗೇ ಬಾರದಂತೆ ಮೈ ಮೇಲೆ, ಕೈ ಕಾಲುಗಳ ಸಂಧಿಯಲ್ಲಿ ಅಂಟಿಕೊಂಡು ನಯವಾಗಿ ರಕ್ತ ಹೀರುತ್ತವೆ.

ವೇಂಪೈರ್ ಬ್ಯಾಟ್ – ರಕ್ತ ಹೀರುವ ಬಾವಲಿ ದಕ್ಷಿಣ ಅಮೆರಿಕಾದಲ್ಲಿ ಜಾಸ್ತಿ. ನಾನು ಉರುಗ್ವೆಯಲ್ಲಿರುವಾಗ ಒಮ್ಮೆ ಈ ಬಾವಲಿಯನ್ನು ನೋಡಲೆಂದೇ ಅರ್ಜೆಂಟೀನಾದ ಗಡಿಗೆ ಹೋಗಿದ್ದೆ. ಇದು ಸಂಪೂರ್ಣ ಇನ್ನೊಂದು ಜೀವಿಯ ರಕ್ತವನ್ನೇ ಆಹಾರವಾಗಿಸಿ ಬದುಕುವ ಜೀವಿ. ರಾತ್ರಿಯಾಯಿತೆಂದರೆ ತಾವು ವಾಸಿಸುವ ಮರದ ಪೊಟರೆಯಿಂದ ಕೆಳಕ್ಕಿಳಿದು ಬರುತ್ತವೆ. ಮೆಲ್ಲಗೆ ಕೃಷಿಕರು ಕಟ್ಟಿ ಹಾಕಿದ ದನದ ಕಾಲ ಗೊರಸಿನ ಮೇಲ್ಗಡೆ ಅಥವಾ ದನದ ಕಿವಿಯ ಹಿಂಭಾಗಕ್ಕೆ ತನ್ನ ಅತ್ಯಂತ ಹರಿತವಾದ ಹಲ್ಲಿನಿಂದ ಸಣ್ಣಗೆ ಗಾಯಗೊಳಿಸಿ ರಕ್ತ ಹೊರಸೂಸುವಂತೆ ಮಾಡುತ್ತವೆ.

ಇವು ರಕ್ತವನ್ನು ಹೀರುವ ಜೀವಿಗಳಲ್ಲ – ಬದಲಿಗೆ ರಕ್ತವನ್ನು ನೆಕ್ಕಿ ನೆಕ್ಕಿ ಕುಡಿಯುತ್ತವೆ. ಒಂದೇ ದಿನ ರಕ್ತ ಸಿಗಲಿಲ್ಲವೆಂದರೂ ಆ ಬಾವಲಿಗಳು ಬದುಕುವುದಿಲ್ಲ. ಪ್ರತೀ ದಿನ ಒಂದು ಹಿಡಿ ರಕ್ತ ಬೇಕೇ ಬೇಕು. ಈ ಬಾವಲಿಗಳು ಹೀಗೆ ರಕ್ತ ಕುಡಿದದ್ದು ಈ ಪ್ರಾಣಿಗಳ ಅನುಭವಕ್ಕೇ ಬರುವುದಿಲ್ಲ. ಒಟ್ಟಾರೆ ನೋವಿನ ಅನುಭವಕ್ಕೆ, ಪ್ರಜ್ಞೆಗೆ ಬಾರದಂತೆ ರಕ್ತ ಹೀರುವ ಈ ಜೀವಿಗಳು ವಿಶೇಷವೇ ಹೌದು.

ಲೀಚ್ ಅಥವಾ ವೇಂಪೈರ್ ಬ್ಯಾಟ್ ಅಥವಾ ಇನ್ನೊಂದು ಈ ರೀತಿ ರಕ್ತ ಹೀರುವ ಜೀವಿಗಳೇನು ಮಾರಣಾಂತಿಕವಲ್ಲ, ಒಂದೆರಡು ಕಚ್ಚಿ, ರಕ್ತಹೀರಿದರೆ ಅಂಥದ್ದೇನೂ ಆಗುವುದಿಲ್ಲ. ಆದರೆ ನಮ್ಮ, ಪ್ರಾಣಿಗಳ ತೀರಾ ಬೇಸಿಕ್ ಪ್ರಯಾದ ನೋವಿನ ಅನುಭವವಕ್ಕೆ ಬಾರದಂತೆ, ಮರಗಟ್ಟಿಸುವ ವಿಶೇಷ ರಾಸಾಯನಿಕವನ್ನು ತನ್ನಲ್ಲಿ ಉತ್ಪಾದಿಸಿ ಅದನ್ನು ತನ್ನ ಬದುಕಿಗೆ, ಆಹಾರಕ್ಕೆ ಬಳಸಿ ಕೊಳ್ಳುವುದು ಅದೆಂತಹ ವಿಸ್ಮಯವಲ್ಲವೇ!

ತಮ್ಮ ದೇಹಕ್ಕೆ ಬೇಕಾಗುವ ರಾಸಾಯನಿಕವನ್ನು ಉತ್ಪಾದಿಸುವುದು ಜೀವಿಗಳಲ್ಲಿ ಸಾಮಾನ್ಯ. ನಾವು ಕೂಡ ಅದೆಷ್ಟೋ ಕೆಮಿಕಲ್‌ಗಳನ್ನು, ಎಂಜೈಮ್ ಗಳನ್ನು ದೇಹದೊಳಕ್ಕೆ ತಯಾರಿಸಿಕೊಳ್ಳುತ್ತೇವೆ. ಆದರೆ ತನ್ನ ಶಿಕಾರಿಯ ಬೇಸಿಕ್ ಪ್ರಜ್ಞೆಯಾದ ನೋವನ್ನು ಯಾಮಾರಿಸುವ ರಾಸಾಯನಿಕವನ್ನು ಉತ್ಪಾದಿಸಿ ಬಳಸುವುದು ಬಹಳಷ್ಟು ಬಾರಿ ವಿಕಾಸವಾದದ ಜಿಜ್ಞಾಸೆಗೆ ಮೀರಿದ್ದು ಎಂದೆನಿಸುತ್ತದೆ.

ಈ ರೀತಿ ನೋವಾಗದಂತೆ ರಕ್ತ ಹೀರುವ ಅದೆಷ್ಟೋ ಜೀವಿಗಳಿವೆ. ಒಂದು ವೇಳೆ ಇಂತಹ ಶಕ್ತಿ ಸೊಳ್ಳೆಗಿದ್ದಿದ್ದರೆ ನಮ್ಮ ಅವಸ್ಥೆ ಹೇಗಾಗಿರುತ್ತಿತ್ತು ಅಲ್ಲವೇ? ನಮ್ಮ ಪುಣ್ಯ. ನಮಗೆ ಕೈಗೋ, ಕಾಲಿಗೋ ಏನೋ ಒಂದು ಗಾಯವಾಗಿ ನೋವಾದಾಗ ಈ ನೋವು ಎನ್ನುವ ಪ್ರಜ್ಞೆಯೇ ಇಲ್ಲದಿದ್ದರೆ ಒಳ್ಳೆಯದಿತ್ತೇನೋ ಎಂದು ಅನ್ನಿಸುವುದಿದೆ.

ಹಲ್ಲು ನೋವಾದಾಗ, ಅಥವಾ ಕಿಡ್ನಿಯಲ್ಲಿ ಅಥವಾ ಗಾಲ್ ಬ್ಲಾಡರ್‌ನಲ್ಲಿ ಕಲ್ಲು ಉಂಟಾಗಿ ನೋವಾದಾಗ ಬದುಕೇ ಸಾಕೋ ಸಾಕೆನ್ನಿಸುವುದುಂಟು. ಹಲವರಿಗೆ ಈಗೀಗ ಬೆನ್ನು ನೋವು ನಿರಂತರವಾಗಿ ಕಾಡುತ್ತಲೇ ಇರುತ್ತದೆ. ಗಾಯ, ನೋವು ಚಿಕ್ಕದಿರಲಿ, ದೊಡ್ಡದಿರಲಿ ಯಾರಿಗೂ ಬೇಡ. ಇಂತಹ ಒಂದು ನೋವಿನ ಪ್ರಜ್ಞೆ – ಸೆನ್ಸ್ ಅನ್ನು ಆ ಭಗವಂತ ನಮಗೆಲ್ಲ ಕೊಟ್ಟದರೂ ಏಕೆ? ಈ ಲೀಚ್‌ಗಳು ತಮ್ಮಲ್ಲಿ ತಯಾರಿಸುವ ರಾಸಾಯನಿಕ ನಮ್ಮ ದೇಹದಲ್ಲೂ ತಯಾರಾಗಿ ಸಂಪೂರ್ಣ ನೋವೇ ಆಗದಂತಿದ್ದರೆ ಎಷ್ಟು ಒಳ್ಳೆಯದಿತ್ತಲ್ಲ ಎಂದೆಲ್ಲ ಅನ್ನಿಸುವುದುಂಟು.

ಅದೆಲ್ಲ ಅನ್ನಿಸುವುದು ನಮಗೆ ನೋವಾಗಿ ನರಳುವಾಗ ಮಾತ್ರ. ದೇಹದಲ್ಲಿ ನೋವಾದಾಗ ತಕ್ಕ ಮಟ್ಟಿಗೆ ಎಂಡೋರ್ಫಿನ್ ತಯಾರಾದರೂ ಅವು ನೋವಿನ ಪ್ರಮಾಣವನ್ನು ತಗ್ಗಿಸುತ್ತವೆಯೇ ಹೊರತು ನೋವನ್ನು ಶೂನ್ಯವಾಗಿಸುವುದಿಲ್ಲ. ಒಂದೊಮ್ಮೆ ನಮ್ಮ ದೇಹದಲ್ಲಿ ನೋವಿನ ಪ್ರಯೇ ಇಲ್ಲದಿರುತ್ತಿದ್ದರೆ ಹೇಗಿರುತ್ತಿತ್ತು? ಕೆಲ ವರ್ಷಗಳ ಹಿಂದೆ ಸೈನ್ಸ್ ಮ್ಯಾಗಜಿನ್‌ನಲ್ಲಿ ಒಂದು ವರದಿ ಪ್ರಕಟವಾಗಿತ್ತು.

ಪಾಕಿಸ್ತಾನದ ಲಾಹೋರಿನ ಒಂದು ಖುರೇಷಿ ಮನೆತನದಲ್ಲಿ ಹಲವರಿಗೆ ನೋವಿನ ಪ್ರಜ್ಞೆಯೇ ಸಂಪೂರ್ಣವಾಗಿ ಇಲ್ಲ ಎಂದು. ಅವರಿಗೆ ಸೂಜಿ ಚುಚ್ಚಿದರೆ, ಬೆಂಕಿ ಮುಟ್ಟಿದರೆ ಉರಿಯಾಗುತ್ತಿತ್ತು, ಆದರೆ ಗಾಯವಾದರೆ ಅಥವಾ ಯಾವುದಾದರೂ ಒಂದು ಅಂಗಕ್ಕೆ ಪೆಟ್ಟು ಬಿದ್ದರೆ ಆಗುವ ನೋವಿನ ಅನುಭವ ಅವರಿಗಾಗುತ್ತಿರಲಿಲ್ಲ. ಅವರನ್ನು ಅಭ್ಯಾಸ ಮಾಡಲು ಒಂದಿಷ್ಟು ವಿಜ್ಞಾನಿಗಳ ದಂಡೇ ಅಲ್ಲಿಗೆ ಅಂದು ಧಾವಿಸಿತ್ತು.

ಅಲ್ಲಿ ನೋಡಿದಾಗ, ಅವರಬ್ಬ ತುಟಿಯನ್ನು ಕಚ್ಚಿಕೊಂಡು ಗಾಯ ಮಾಡಿಕೊಂಡಿದ್ದ. ಆ ಗಾಯವನ್ನೇ ಮತ್ತಷ್ಟು ಕಡಿಯುತ್ತಿದ್ದ. ಇನ್ನೊಬ್ಬ ತನ್ನ ನಾಲಿಗೆಯ ತುದಿಯನ್ನು ತಾನೇ ಕಡಿದುಕೊಂಡು ಮೊಂಡು ಮಾಡಿಕೊಂಡಿದ್ದ. ಹೀಗೆ ನೋವಿನ ಅರಿವಾಗದ ಆ ಕುಟುಂಬದ ಎಲ್ಲರ ಒಂದಿಂದು ಅಂಗಕ್ಕೆ ಹತ್ತಾರು ಗಾಯಗಳಿದ್ದವು ಅಥವಾ ಊನವಿತ್ತು. ಅದೆಲ್ಲವೂ ಅವರೇ ಮಾಡಿಕೊಂಡದ್ದು. ಅವರೆಲ್ಲರಿಗೆ ನೋವಿನ ಪ್ರ ಇಲ್ಲದುದರಿಂದ ಈ ಗಾಯದ ಬಗ್ಗೆ ಅವರಿಗೆ ವಿಶೇಷ ಗಮನವೇ ಇರಲಿಲ್ಲ.

ನಂತರದಲ್ಲಿ ಅವರ ಮೇಲೆ ಅದೆಷ್ಟೋ ಪರೀಕ್ಷೆಗಳೆಲ್ಲ ನಡೆದವು. ಕೊನೆಯಲ್ಲಿ ತಿಳಿದದ್ದೇನೆಂದರೆ ಜೀನ್ಸ್‌ನದ ಒಂದು ಪರಾಮಶಿ ಮ್ಯುಟೇಷನ್‌ನಿಂದಾಗಿ ಅವರೆಲ್ಲ ಇಂಥದ್ದೊಂದು ಸ್ಥಿತಿಗೆ ತಲುಪಿದ್ದರು. ಒಂದು ವೇಳೆ ಮನುಷ್ಯನಿಗೆ ನೋವಿನ ಪ್ರಜ್ಞೆಯೇ ಇಲ್ಲದಿರುತ್ತಿದ್ದರೆ ನಾವೆ ಅಕರಾಳ ವಿಕಾರವಾಗಿರುತ್ತಿದ್ದೆವು ಎನ್ನುವುದಕ್ಕೆ ಇದಕ್ಕಿಂತ ಒಳ್ಳೆಯ ಉದಾಹರಣೆ ಇನ್ನೊಂದು ಬೇಡವೆನ್ನಿಸುತ್ತದೆ.

ಬಹುಶಃ ನಾವೆಲ್ಲ ಈ ಖುರೇಷಿ ಖಾಂದಾನ್‌ನಂತೆ ಪ್ರತಿಯೊಬ್ಬರೂ ಒಂದೊಂದು ವಿಕಾರ ಮಾಡಿಕೊಳ್ಳುತ್ತಿದ್ದೆವು. ನಾವು ನೀವೆಲ್ಲ ಒಂದಿಂದು ಸಮಯದಲ್ಲಿ ದೇಹದ ಒಂದಾದರೂ ಭಾಗವನ್ನು ಸುಟ್ಟುಕೊಂಡಿರುತ್ತೇವೆ. ಈ ಸುಟ್ಟುಕೊಂಡಾಗ ತಕ್ಷಣ ಸೂಜಿ ಚುಚ್ಚಿದಂತೆ ಅನುಭವವಾಗಿ ನಾವು ದೇಹದ ಉಷ್ಣ ತಾಗಿದ ಭಾಗವನ್ನು ಹಿಂದಕ್ಕೆ ಎಳೆದುಕೊಳ್ಳುವುದು ಮೊದಲನೆಯದು. ಆದರೆ ನಂತರ ಅನುಭವಿಸುವ ಉರಿ ನಮ್ಮನ್ನು ಇನ್ನೆಂದೂ ಬಿಸಿಯ ರಿಸ್ಕ್‌ಗೆ ಒಳಗಾಗದಂತೆ, ನೆನಪಿನಲ್ಲಿಡುವಂತೆ ಮಾಡುತ್ತದೆ. ಹೀಗೆ ನೋವು ಎನ್ನುವುದು ಪರೋಕ್ಷವಾಗಿ ನಮ್ಮ ದೇಹಕ್ಕೆ ಘಾಸಿಯಾಗದಂತೆ ನಮ್ಮನ್ನು ಒತ್ತಾಯಿಸಿ ಬದುಕಿಸುತ್ತದೆ. ಈ ಎಲ್ಲ ಕಾರಣಕ್ಕೆ ಬೇಡವೆನ್ನಿಸುವ ನೋವು ನಮ್ಮನ್ನು ಕಾಪಾಡುತ್ತದೆ.

ನೋವು ಎಷ್ಟು ಮುಖ್ಯ ಎನ್ನುವುದಕ್ಕೆ ಇವಿಷ್ಟು ಸಾಕು. ಸಾಮಾನ್ಯವಾಗಿ ನಾವಂದುಕೊಳ್ಳುವುದಿದೆ – ನೋವು ಎನ್ನುವುದು ಘಾಸಿ, ರೋಗ ಮೊದಲಾದವುಗಳ ಪರಿಣಾಮ ಎಂದು. ಆದರೆ ಕೆಲವೊಮ್ಮೆ ಈ ನೋವೇ ರೋಗವಾಗುವುದಿದೆ. ಇದನ್ನು ವಿವರಿಸುವುದಕ್ಕಿಂತ ಮೊದಲು ನೋವನ್ನು ನಾವು ಹೇಗೆ ಗ್ರಹಿಸುತ್ತೇವೆ ಎಂದು ಚಿಕ್ಕದಾಗಿ ವಿವರಿಸುತ್ತೇನೆ.

ದೇಹಕ್ಕೆ ಘಾಸಿಯಾದಾಗ ನರದ ತುದಿಯಲ್ಲಿರುವ ನೋಸಿಸೆಪ್ಟರ್ ನೋವುಗ್ರಾಹಿಗಳು ಅದನ್ನು ಗ್ರಹಿಸಿ ಆ ಸಂದೇಶವನ್ನು ಮೆದುಳಿಗೆ ರವಾನಿಸುತ್ತವೆ. ಈ ರವಾನೆಯಾದ ಸಿಗ್ನಲ್ ಅನ್ನು ಮೆದುಳು ನೋವು ಎಂದು ಗ್ರಹಿಸುತ್ತದೆ, ಅದಕ್ಕನುಗುಣವಾಗಿ ನಮ್ಮ ದೇಹವನ್ನು ಪ್ರತಿಕ್ರಿಯಿಸುವಂತೆ ಮಾಡುತ್ತದೆ. ಅದಲ್ಲದೇ ಆ ನೋವು ಮತ್ತು ಘಟನೆಯನ್ನು ಮೆದುಳು ನೆನಪಿಟ್ಟುಕೊಳ್ಳುತ್ತದೆ.

ಗಾಯ ದೊಡ್ಡದಾದಾಗ ನೋವು ಜಾಸ್ತಿ ಅಲ್ಲವೇ, ಅದೆಲ್ಲ ಹೆಚ್ಚು – ಕಡಿಮೆ ಮೊದಲಾದ ಗ್ರಹಿಕೆಯಾಗುವುದು ಮೆದುಳಿನಲ್ಲಿ, ನೋವಿನ ಪ್ರಮಾಣವನ್ನು ನಿರ್ಧರಿಸುವುದು ನಮ್ಮ ಮೆದುಳು. ಈ ಕಾರಣಕ್ಕೆ ದಿನಾ ಇಂಜೆಕ್ಷನ್ ಚುಚ್ಚಿಕೊಳ್ಳುವ ಡಯಾಬಿಟೀಸ್ ರೋಗಿಗೆ ಉಂಟಾಗುವ ನೋವಿಗೆ ಮತ್ತು ಅಪರೂಪಕ್ಕೆ ಇಂಜೆಕ್ಷನ್ ತೆಗೆದುಕೊಂಡಾಗ ಉಳಿದವರಿಗೆ ಆಗುವ ನೋವಿಗೆ ಬಹಳಷ್ಟು ವ್ಯತ್ಯಾಸವಿದೆ.

ನಮ್ಮ ಮೆದುಳು ನೋವನ್ನು ಸಂಪೂರ್ಣ ಕಂಟ್ರೋಲ್ ಮಾಡುತ್ತದೆ. ಮುಳ್ಳು ಕಾಲಿಗೆ ಚುಚ್ಚಿದಾಗ ನೋವಾಗುತ್ತದೆಯಲ್ಲ, ಅದೇ ಹಿಂದೊಮ್ಮೆ ಹಾವು ಕಚ್ಚಿ ಬದುಕಿದವರಿಗೆ ಚಿಕ್ಕ ಅದೇ ಮುಳ್ಳು ಚುಚ್ಚಿದಾಗ ಉಳಿದವರಿಗಿಂತ ಹೆಚ್ಚಿನ ನೋವು ಮತ್ತು ಆಘಾತ ಉಂಟಾಗುತ್ತದೆ. ಮೆದುಳಿನ ನೆನಪು ಕೂಡ ನಮ್ಮ ನೋವಿನ ಪ್ರಮಾಣವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

ಕೆಲವೊಮ್ಮೆ ಈ ನೋವಿನ ಗ್ರಹಿಕೆಯ ವ್ಯವಸ್ಥೆಯಲ್ಲಿ ಅಪರಾ ತಪರಾ ಆಗುವುದಿದೆ. ಈ ಸ್ಥಿತಿಯನ್ನು ಅಲೋಡಿನಿಯಾ ಎನ್ನಲಾಗುತ್ತದೆ. ಇದು ಪಾಕಿಸ್ತಾನದ ಖುರೇಷಿ ಖಾಂದಾನಿನ ಸ್ಥಿತಿಯ ಉಲ್ಟಾ. ಸಾಮಾನ್ಯವಾಗಿ ಕೈ ಅಥವಾ ಕಾಲು ಮುರಿದಾಗ ಅತ್ಯಂತ ನೋವಾಗುತ್ತದೆಯಲ್ಲ, ಅದು ವಾಸಿಯಾದಾಗ ಆ ನೋವು ಹೋಗಬೇಕು ತಾನೆ. ಆದರೆ ಅಲೋಡೀನಿಯಾ ಇರುವವರಿಗೆ ಈ ನೋವು ಘಾಸಿ ಮಾಣಿದ ನಂತರವೂ ಮುಂದುವರಿಯುತ್ತದೆ.

ಯಾರಾದರೂ ಮುಟ್ಟಿದರೂ ಈ ಹಿಂದೆ ಘಾಸಿಯಾಗಿ ವಾಸಿಯಾದ ಅಂಗದಲ್ಲಿನ ನೋವು ಗ್ರಾಹಿಗಳು ಮೆದುಳಿಗೆ ನೋವಿನ ಸಂದೇಶವನ್ನು ತಪ್ಪಾಗಿ ಕಳಿಸುತ್ತವೆ. ಆಗ ಸುಮ್ಮನೆ ಮುಟ್ಟಿದರೂ ಮುರಿದಕೈ ತಿರುಚಿದ ಅನುಭವ ಅವರದ್ದಾಗಿರುತ್ತದೆ.

ಇತ್ತೀಚೆಗೆ ಇಂತಹ ಹಲವು ಕೇಸ್‌ಗಳು ಎಡೆ ಜಾಸ್ತಿಯಾಗುತ್ತಿದೆ. ಹಿಂದೆಲ್ಲ ಈ ಸಮಸ್ಯೆಯಿದ್ದರೆ ನೋವಿನ ಅರಿವು ಮರೆಮಾಚುವ ಪೇನ್ ಕಿಲ್ಲರ್ ಗಳನ್ನು ನಿರಂತರವಾಗಿ ಕೊಡಬೇಕಾಗಿತ್ತು. ಸಾಮಾನ್ಯವಾಗಿ ಪೇನ್ ಕಿಲ್ಲರ್ ನೇರವಾಗಿ ಕಿಡ್ನಿ ಸೇರಿದಂತೆ ಹಲವು ಅಂಗಗಳ ಮೇಲೆ ಸೈಡ್ ಎಫೆಕ್ಟ್ ಉಂಟು ಮಾಡುತ್ತದೆ. ಈಗ ಪುಣ್ಯವಶಾತ್ ವಿಜ್ಞಾನ ಮುಂದುವರಿದು ಹೀಗೆ ನಮ್ಮ ನೋವು ಗ್ರಾಹಿಗಳು ವ್ಯತಿರಿಕ್ತವಾಗಿ ವ್ಯವಹರಿಸುವುದನ್ನು ಸರಿ ಮಾಡುವ ಶುಶ್ರೂಷೆಗಳು ಬಂದಿವೆ.

ಹಿಂದೊಮ್ಮೆ ಅಮೆರಿಕಾದ ಅಬಾರ್ಷನ್ – ಗರ್ಭಪಾತದ ಸುತ್ತ ನಡೆಯುತ್ತಿರುವ ರಾಜಕೀಯ ದೊಂಬರಾಟಗಳ ಬಗ್ಗೆ ಬರೆದಿದ್ದೆ. ಆ ಸಮಯದಲ್ಲಿ ಮತ್ತು ನಂತರದಲ್ಲಿ ಅತಿಹೆಚ್ಚು ಚರ್ಚೆಯಾದದ್ದು ಗರ್ಭಪಾತ ಮಾಡುವಾಗ ಭ್ರೂಣಕ್ಕೆ ನೋವಿನ ಅನುಭವವಾಗುತ್ತದೆಯೇ ಎಂದು. ಗರ್ಭಧಾರಣೆಯ, ಜೀವಾಂಕುರದ ಯಾವ ಸಮಯದಲ್ಲಿ ನೋವು ಅರಿವಿಗೆ ಬರುತ್ತದೆ ಎಂಬಿತ್ಯಾದಿ ತೀವ್ರ ಚರ್ಚೆಗೆ ಬಂತು.

ಒಂದು ವರದಿಯ ಪ್ರಕಾರ ಭ್ರೂಣ ಎಂಟನೇ ವಾರವಿರುವಾಗಲೇ ನೋವಿನ ಅನುಭವ ಶುರುವಾಗುತ್ತದೆ. ಆದರೆ ಆ ನೋವು ಕಚಗುಳಿಯಂತಿರುತ್ತದೆ ಎಂಬಿತ್ಯಾದಿ ವಿಜ್ಞಾನ ಕಂಡುಹಿಡಿದದ್ದು. ಎಂದರೆ ನೋವೆನ್ನುವುದು ಹುಟ್ಟಿಗಿಂತ ಮೊದಲೇ ನಾವು ಪಡೆದುಕೊಂಡು ಬರುವ, ತೀರಾ ಅಗತ್ಯದ ಒಂದು ಪ್ರಜ್ಞೆ ಎಂದಷ್ಟೇ ನಾವು ಇಲ್ಲಿ ತೆಗೆದುಕೊಳ್ಳೋಣ.

ಒಟ್ಟಾರೆ – ನೋವು ತೀರಾ ಅವಶ್ಯಕ ಪ್ರಜ್ಞೆಯೆಂದು ಎನ್ನುವುದರಲ್ಲಿ ದೂಸ್ರಾ ಮಾತಿಲ್ಲ. ಅಂತೆಯೇ ನೋವಿನ ಶುಶ್ರೂಷೆ ಕೂಡ ಇಂದು ಬಿಲಿಯನ್‌ಗಟ್ಟಲೆ ಡಾಲರ್‌ನ ವ್ಯವಹಾರ ಎನ್ನುವುದು ಕೂಡ ನಿಜ.

ನೋವನ್ನು ಇಂದು ವಿಜ್ಞಾನ ಐದು ವಿಭಾಗವಾಗಿ ವಿಂಗಡಿಸುತ್ತದೆ. ಆದರೆ ನೋವೆನ್ನುವುದು ಅಸಲಿಗೆ ನೂರಾರು ರೀತಿ. ಸಾಮಾನ್ಯವಾಗಿ ಬೇರೆಯವರ ನೋವಿನ ವಿಚಾರ ಕೇಳುವಾಗ ನನಗೂ ಅಂಥದ್ದೇ ನೋವಿತ್ತು ಎನ್ನುತ್ತೇವೆ. ಆದರೆ ಅಸಲಿಗೆ ನೋವಿನ ಅನುಭವ ಕೂಡ ಒಬ್ಬರಿಂದೊಬ್ಬರಿಗೆ ಅವರ ಮೆದುಳಿನ ಕಿತಾಪತಿಯಿಂದಾಗಿ ಬೇರೆ ಬೇರೆಯೇ ಆಗಿರುತ್ತದೆ.

ನೋವು ನಮಗೆ ಸಹ್ಯವಲ್ಲದಿದ್ದರೂ ಅತ್ಯಂತ ಅವಶ್ಯ ಪ್ರಜ್ಞೆಯೆಂದು ಎನ್ನುವುದನ್ನು ಒಪ್ಪಲೇ ಬೇಕು. ಅದೊಂದು ಪ್ರಜ್ಞೆಯಿಲ್ಲದಿದ್ದಲ್ಲಿ ದೇಹ ಘಾಸಿ ಮಾಡುವ ವಾಂಪೈರ್ ಬಾವಲಿ, ಜವಳೆ ರೀತಿಯ ಅದೆಷ್ಟೋ ಜೀವಿಗಳು ನಮ್ಮ ಸುತ್ತ ವಿಕಾಸವಾಗಿಬಿಡುತ್ತಿದ್ದವು. ಅದೆಲ್ಲದಕ್ಕಿಂತ ಹೆಚ್ಚಾಗಿ ನಾವು ಆ ಪ್ರಯಿಲ್ಲದ ಜಗತ್ತಿನಲ್ಲಿ ಇಂದು ಇದ್ದಂತೆ ಇರುತ್ತಲೇ ಇರಲಿಲ್ಲ. ನೋವು ನಮಗೆ ಬೇಡವಾಗಿದ್ದರೂ ನಮ್ಮ ಅಸ್ತಿತ್ವಕ್ಕೆ ಬೇಕೇ ಬೇಕಿತ್ತು – ಹಾಗಾಗಿಯೇ ಅದು ಇದೆ.

**– ಶಿಶಿರ್** ಹೆಗಡೆ



## ಮಕ್ಕಳಿರಲವ್ವ ಮನೆತುಂಬ

> **ಮನುಷ್ಯನ ಜೀವಿತಾವಧಿ 1950ರಲ್ಲಿ ಇದ್ದಂತೆ 35.21 ವರ್ಷಗಳು, ವೈದ್ಯಕೀಯ ಕ್ಷೇತ್ರ ಅಭಿವೃದ್ಧಿಯಿಂದಾಗಿ 2025ರಲ್ಲಿ ಒಬ್ಬ ಮನುಷ್ಯನ ಸರಾಸರಿ ಆಯಸ್ಸು 70.82 ವರ್ಷಗಳು. 75 ವರ್ಷಗಳಲ್ಲಿ ಜೀವಿತಾವಧಿ ಎರಡು ಪಟ್ಟು ಹೆಚ್ಚಾದಂತಾಯಿತು. ವೃದ್ಧರ ಸಂಖ್ಯೆ 153 ಮಿಲಿಯ, 2050ರ ಹೊತ್ತಿಗೆ 347 ಮಿಲಿಯ ಎಂದು ಅಂದಾಜಿಸಲಾಗಿದೆ.**

ಪ್ರಸ್ತುತ ಆಂಧ್ರಪ್ರದೇಶದಲ್ಲಿ ಜನನ ಪ್ರಮಾಣ ಗಣನೀಯವಾಗಿ ಕುಸಿಯುತ್ತಿರುವುದನ್ನು ತಡೆಯಲು ಹಾಗೂ ಯುವ ಜನಸಂಖ್ಯೆಯನ್ನು ಹೆಚ್ಚಿಸಲು ಮುಖ್ಯಮಂತ್ರಿಗಳು ಮಹತ್ವದ ಘೋಷಣೆ ಮಾಡಿದ್ದಾರೆ. ಹೊಸ ಜನಸಂಖ್ಯಾ ನೀತಿಯಡಿಯಲ್ಲಿ ಮೂರನೇ ಮಗು ಜನಿಸಿದರೆ ರೂ.30000, ನಾಲ್ಕನೇ ಮಗು ಜನಿಸಿದರೆ ರೂ.40000 ನಗದು ಪ್ರೋತ್ಸಾಹ ಧನ.

ಒಂದು ಕಾಲದಲ್ಲಿ ಜನಸಂಖ್ಯಾ ನಿಯಂತ್ರಣಕ್ಕೆ ಇನ್ನಿಲ್ಲದ ಒತ್ತು ನೀಡಿದ್ದೆವು. ಆಗಲೂ ಆಮೀಷಗಳಿದ್ದವು. ಈಗ ಪರಿಸ್ಥಿತಿ ಬದಲಾಗಿದೆ. ಮತ್ತೆ ಮಕ್ಕಳೇ ನಮ್ಮ ಆಸ್ತಿ ಮತ್ತು ಭವಿಷ್ಯದ ಸಂಪತ್ತು ಎನ್ನುವ ಹಂತಕ್ಕೆ ಬಂದಿದ್ದೇವೆ.



ಸರಕಾರ ಕೊಡುವ ಕೇವಲ ಮೂವತ್ತು– ನಲವತ್ತು ಸಾವಿರಕ್ಕೆ ಮಕ್ಕಳನ್ನು ಮಾಡಿಕೊಳ್ಳುವ ಇರಾದೆ ಯಾವ ಪೋಷಕರಿಗೂ ಇರುವುದಿಲ್ಲ. ಮಗು ಮಾಡಿಕೊಳ್ಳುವಾಗ ಕೊಡುವ ಈ ಅಲ್ಪ ಹಣದಿಂದ ಮಗುವಿನ ಭವಿಷ್ಯವನ್ನು ರೂಪಿಸಲಾಗುತ್ತದೆಯೇ? ಹೋಗಲಿ ಆಸ್ಪತ್ರೆ ಖರ್ಚಿಗಾದರೂ ಸಾಲುತ್ತದೆಯೇ? ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಗೆಲ್ಲುವುದಕ್ಕಾಗಿ ಅವೈಜ್ಞಾನಿಕವಾಗಿ ಘೋಷಿಸುವ ಉಚಿತ ಯೋಜನೆಗಳು ಕೂಡ ಇದೇ ನಿಟ್ಟಿನಲ್ಲಿ ಸಾಗುತ್ತಿವೆ. ದೇಶ ಮತ್ತು ರಾಜ್ಯಗಳನ್ನು ದಿವಾಳಿತನಕ್ಕೆ ದೂಡುವ ಆಶ್ವಾಸನೆಗಳು.

ಕ್ರಿ.ಶ 100ರಲ್ಲಿ ಭಾರತದ ಜನಸಂಖ್ಯೆ 5.27 ಕೋಟಿ ಇದ್ದದ್ದು 1000ನೇ ಇಸವಿಯಲ್ಲಿ 8.67 ಕೋಟಿಗೆ ಏರಿತು, 2001ಕ್ಕೆ 102.86 ಕೋಟಿ, ಪ್ರಸ್ತುತ 147.54 ಕೋಟಿ ಜನಸಂಖ್ಯೆಯೊಂದಿಗೆ ವಿಶ್ವದಲ್ಲಿ ಮೊದಲ ಸ್ಥಾನದಲ್ಲಿದೆ. ಮತ್ತೇಕೆ ಹೆಚ್ಚು ಮಕ್ಕಳನ್ನು ಹೆರುವುದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ?ರಾಜಕೀಯದಲ್ಲಿ ಲಾಭ ಇಲ್ಲದೆ ಏನನ್ನೂ ಮಾಡುವುದಿಲ್ಲ.

ಮನುಷ್ಯನ ಜೀವಿತಾವಧಿ 1950ರಲ್ಲಿ ಇದ್ದಂತೆ 35.21 ವರ್ಷಗಳು, ವೈದ್ಯಕೀಯ ಕ್ಷೇತ್ರ ಅಭಿವೃದ್ಧಿಯಿಂದಾಗಿ 2025ರಲ್ಲಿ ಒಬ್ಬ ಮನುಷ್ಯನ ಸರಾಸರಿ ಆಯಸ್ಸು 70.82 ವರ್ಷಗಳು. 75 ವರ್ಷಗಳಲ್ಲಿ ಜೀವಿತಾವಧಿ ಎರಡು ಪಟ್ಟು ಹೆಚ್ಚಾದಂತಾಯಿತು. ವೃದ್ಧರ ಸಂಖ್ಯೆ 153 ಮಿಲಿಯ, 2050ರ ಹೊತ್ತಿಗೆ 347 ಮಿಲಿಯ ಎಂದು ಅಂದಾಜಿಸಲಾಗಿದೆ.

ಭಾರತದ ಫಲವತ್ತತೆ ದರವು 1950ರಲ್ಲಿ 6.20 ಇದ್ದದ್ದು ಈಗ 2ಕ್ಕಿಂತ ಕೆಳಗಿಳಿದಿದೆ, ಆಂಧ್ರಪ್ರದೇಶದಲ್ಲಿ ಫಲವತ್ತತೆಯ ದರವು 1.50ಕ್ಕೆ ಇಳಿದಿದೆ, ಒಂದು ಪ್ರದೇಶದ ಜನಸಂಖ್ಯೆ ಸ್ಥಿರವಾಗಿರಲು ಕನಿಷ್ಟ 2.10 ಇರಬೇಕು. ವಯಸ್ಸಾದವರಿಂದ ರಾಜ್ಯದ ಆರ್ಥಿಕತೆ ಮತ್ತು ಮಾನವ ಸಂಪನ್ಮೂಲಗಳ ಮೇಲೆ ಹೊಡೆತ ಬೀಳುವುದು.

ಕೇಂದ್ರ ಸರಕಾರದಲ್ಲಿ ಸುಮಾರು 68 ಲಕ್ಷ ನಿವೃತ್ತರು, ಅವರ ಕುಟುಂಬದವರು ಮತ್ತು ನಮ್ಮ ರಾಜ್ಯದಲ್ಲಿ ಸುಮಾರು 5 ಲಕ್ಷದಷ್ಟು ನಿವೃತ್ತರು ಪಿಂಚಣಿ ಪಡೆಯುತ್ತಿದ್ದಾರೆ. ಪಿಂಚಣಿ ಪಡೆಯುವುದು ಹಕ್ಕು. ಆದರೆ ಈ ಹಂತದಲ್ಲಿ ಇವರಿಂದ ಕೊಡುಗೆ ತೀರಾ ಕಡಿಮೆ. ಮತ್ತೊಂದು ರಾಜಕೀಯ ಮಹತ್ವದ ಕಾರಣವೆಂದರೆ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯಲ್ಲಿ ಜನಸಂಖ್ಯೆ ನಿಯಂತ್ರಣದಿಂದ ರಾಜಕೀಯ ಪ್ರಾತಿನಿಧ್ಯ ಕಳೆದುಕೊಳ್ಳಬಹುದು ಎಂಬ ಆತಂಕದಿಂದ ಹೆಚ್ಚು ಮಕ್ಕಳನ್ನು ಮಾಡಿಕೊಳ್ಳಲು ಆಂದ್ರ ಪ್ರದೇಶವು ಪ್ರೋತ್ಸಾಹಿಸುತ್ತಿರಬಹುದು.

ಪ್ರಕೃತಿಯ ವಿರುದ್ಧವಾಗಿ ನಡೆಯಬಾರದು. ಸರಕಾರಗಳು ಏನೂ ಮಾಡದೇ ಇದ್ದರೂ ಸಮತೋಲನ ಕಾಪಾಡಿಕೊಳ್ಳುವ ಶಕ್ತಿ ಪ್ರಕೃತಿಗೆ ಇದೆ. ಇತ್ತೀಚೆಗೆ ಕರೋನಾ ಸಂದರ್ಭದಲ್ಲಿ ಹೆಣಗಳು ಉರುಳಿದ್ದನ್ನು ನೋಡಿದ್ದೇವೆ. 147.54 ಕೋಟಿ ಜನಸಂಖ್ಯೆ ಸಾಕಲ್ಲವೇ? ಮುದುಕರನ್ನು ಅಭಿವೃದ್ಧಿಯ ದೃಷ್ಟಿಯಿಂದ ಟಾರ್ಗೆಟ್ ಮಾಡಿದರೆ ಯಶಸ್ವಿ ಆಗುತ್ತೇವೆ ಎನ್ನುವುದು ಭ್ರಮೆ.

**– ಮಿರ್ಲೆ** ಚಂದ್ರಶೇಖರ



## ಕನ್ನಡಿ

ಪ್ರತಿಯೊಂದು ಮನೆಯ ಗೋಡೆಯ ಮೇಲೆ ಕನ್ನಡಿಯೊಂದಿರಬೇಕು, ಅಲ್ಲಿ ನಾವು ನಮ್ಮ ಮುಖವನ್ನು ನೋಡುವಾಗ ನಮ್ಮೊಳಗಿನ ಭಾವನೆಗಳು ಕನ್ನಡಿಯಲ್ಲಿ ಬಂದು ಕಾಣುವಂತಾಗಬೇಕು. ನಮ್ಮ ಮನಸ್ಸು ಆಲೋಚಿಸುವ ರೀತಿ ಒಳಿತು ಕೆಡುಕುಗಳೆಲ್ಲವೂ ಕೂಡ ಕಣ್ಣ ಮುಂದೆ ಬಿತ್ತರವಾಗಬೇಕು, ಒಳಿತಿನಿಂದ ಕೆಡುಕಿನಿಂದ ಮುಂದಾಗಬಹುದಾದ ಅನಾಹುತಗಳು ಒಳಿತುಗಳು ಕಣ್ಣ ಮುಂದೆ ಕಾಣುವಂತಿರಬೇಕು, ನಮ್ಮ ಒಳ್ಳೆಯ ಆಲೋಚನೆಗಳು ಮಾತ್ರ ನಮ್ಮ ಮುಖಕ್ಕೆ ಸೌಂದರ್ಯವನ್ನು ನೀಡಬೇಕು, ಕೆಟ್ಟ ಆಲೋಚನೆಗಳು ಹೆಚ್ಚಾದಷ್ಟು ಮುಖ ವಿಕಾರಗೊಳ್ಳಬೇಕು ಇಂತಹ ಕನ್ನಡಿಗಳು ಇದ್ದಾಗ ಮಾತ್ರ ಜಗತ್ತು ಬದಲಾಗುತ್ತದೆ, ವ್ಯಕ್ತಿ ಬದಲಾಗ್ತಾನೆ. ಹಾಗಾಗಿ ಕನ್ನಡಿ ಹುಡುಕುತ್ತಿದ್ದೇನೆ ಹುಡುಕಿ ಕೊಡುವಿರಾ?

**– ಧೀರಜ್** ಬೆಳ್ಳಾರೆ

## ಆರು ಲಕ್ಷಕ್ಕೆ ಹರಾಜಾದ ಮೊದಲ ವಿಮಾನ ಟಿಕೆಟ್!

ಇಂದು ವಿಮಾನ ಪ್ರಯಾಣ ಎಂದರೆ ಸಾಮಾನ್ಯ ಜನರಿಗೂ ಸುಲಭವಾದ ಸಂಗತಿ. ದೇಶದ ಒಳಗೇ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಕೆಲವೇ ಗಂಟೆಗಳಲ್ಲಿ ತಲುಪುವುದು ದಿನನಿತ್ಯದ ವ್ಯವಹಾರವಾಗಿದೆ. ಆದರೆ ನೂರು ವರ್ಷಗಳ ಹಿಂದೆ? ಆಕಾಶದಲ್ಲಿ ವಾಣಿಜ್ಯ ಪ್ರಯಾಣ ಎಂಬುದೇ ಕನಸು ಆಗಿತ್ತು. ಆ ಕನಸು ನನಸಾದ ಐತಿಹಾಸಿಕ ಕ್ಷಣವನ್ನು ನೋಡೋಣ.

ನಿಮಗೆ ಗೊತ್ತಿರುವ ಹಾಗೆ ಡಿಸೆಂಬರ್ 17, 1903ರಲ್ಲಿ ವಿಲ್ಬರ್ ರೈಟ್ ಮತ್ತು ಆರ್ವಿಲ್ಲೆ ರೈಟ್ ಕೇವಲ 12 ಸೆಕೆಂಡುಗಳ ಕಾಲ 120 ಅಡಿ ದೂರ ಹಾರುವ ಮೂಲಕ ಇತಿಹಾಸ ಸೃಷ್ಟಿಸಿದರು. ಇದು ಕೇವಲ ಹದಿನೆರಡು ಸೆಕೆಂಡುಗಳ ಹಾರಾಟವಾಗಿದ್ದರೂ ಭವಿಷ್ಯದ ವಿಮಾನಯಾನಕ್ಕೆ ನಾಂದಿ ಹಾಡಿತು. ಈಗಂತೂ ಹಲವಾರು ಗಂಟೆಗಳ ಕಾಲ ಎಲ್ಲೂ ನಿಲುಗಡೆ ಇಲ್ಲದೇ ವಿಮಾನಗಳು ಆಕಾಶದಲ್ಲಿ ಹಾರಾಟ ನಡೆಸುತ್ತವೆ.

ವಿಶ್ವದ ಮೊದಲ ವಾಣಿಜ್ಯ ವಿಮಾನ ಪ್ರಯಾಣ ಆರಂಭವಾದದ್ದು ಯಾವಾಗ ಗೊತ್ತೇ? 1914ರ ಜನವರಿ 1ರಂದು ಅಮೆರಿಕದ ಫ್ಲೋರಿಡಾದಲ್ಲಿ ಈ ಇತಿಹಾಸ ರಚನೆಯಾಯಿತು. ಸೈಂಟ್ ಪೀಟರ್ಸ್ ಬರ್ಗ್ ನಗರದಿಂದ ಟ್ಯಾಂಪಾ ನಗರಕ್ಕೆ ಸುಮಾರು 42



ಕಿಲೋಮೀಟರ್ ದೂರವನ್ನು ಕೇವಲ 23 ನಿಮಿಷಗಳಲ್ಲಿ ಕ್ರಮಿಸಿದ ವಿಮಾನವು ವಿಶ್ವದ ಮೊದಲ ವಾಣಿಜ್ಯ ವಿಮಾನ ಹಾರಾಟವಾಗಿ ಗುರುತಿಸಲ್ಪಟ್ಟಿದೆ. ಈ ಐತಿಹಾಸಿಕ ಹಾರಾಟವನ್ನು ನಡೆಸಿದವರು ಪೈಲಟ್ ಟೋನಿ ಜಾನಸ್. 567 ಕೆಜಿ ತೂಕದ, 8 ಮೀಟರ್ ಉದ್ದ ಮತ್ತು 13 ಮೀಟರ್ ಅಗಲದ ಈ ವಿಮಾನವನ್ನು ರೈಲಿನ ಮೂಲಕ ಸಾಗಾಟ ನಡೆಸಿ ಸೈಂಟ್ ಪೀಟರ್ಸ್ ಬರ್ಗ್ ಗೆ ತರಲಾಗಿತ್ತು. ಈ ವಿಮಾನದ ವಿಶೇಷತೆ ಗೊತ್ತಾ? ಇದರಲ್ಲಿ ಇದ್ದದ್ದು ಕೇವಲ ಒಂದು ಪ್ರಯಾಣಿಕ ಸೀಟು ಮಾತ್ರ. ವಿಮಾನದಲ್ಲಿ ಕೇವಲ ಒಂದೇ ಸೀಟು ಇದ್ದ ಕಾರಣ, ಪ್ರಯಾಣಿಕರ ಟಿಕೆಟ್ ಅನ್ನು ಹರಾಜು ಮಾಡಬೇಕಾಯಿತು! ಹರಾಜಿನಲ್ಲಿ ಸುಮಾರು ಮೂರು ಸಾವಿರ ಜನರು ಭಾಗವಹಿಸಿದ್ದರು. ಅಂತಿಮವಾಗಿ ಸೈಂಟ್ ಪೀಟರ್ಸ್ ಬರ್ಗ್ ನ ಮಾಜಿ ಮೇಯರ್ ಅಬ್ರಾಮ್ ಸಿ. ಫಿಲ್ ಎಂಬ ವ್ಯಕ್ತಿ 400 ಡಾಲರ್ ಪಾವತಿಸಿ ಹರಾಜು ಟಿಕೆಟ್ ಗೆದ್ದರು. ಆ ಸಮಯದಲ್ಲಿ ಅದು ಭಾರೀ ಮೊತ್ತವಾಗಿತ್ತು. ಇಂದಿನ ಮೌಲ್ಯದಲ್ಲಿ ಹೊಂದಿಸಿದರೆ ಸುಮಾರು ರೂಪಾಯಿ ಆರು ಲಕ್ಷಕ್ಕಿಂತಲೂ ಹೆಚ್ಚು.

ಮೊದಲ ವಾಣಿಜ್ಯ ಪ್ರಯತ್ನದ ರೋಚಕ ಕಥೆ : ಮೊದಲ ಬಾರಿ ಹಾರಿಸುವಾಗ ವಿಮಾನವು ನೀರಿನ ಮೇಲ್ಮೈನಿಂದ ಸಾಕಷ್ಟು ಎತ್ತರಕ್ಕೆ ಏಳಲಿಲ್ಲ. ಎಂಜಿನ್ ಸಮಸ್ಯೆಯಿಂದಾಗಿ ಪೈಲಟ್ ಅರ್ಧದಾರಿಯಲ್ಲೇ ವಿಮಾನವನ್ನು ಕೆಳಗೆ ಇಳಿಸಬೇಕಾಯಿತು. ಆದರೆ ಕೆಲವು ಭಾಗಗಳ ದುರಸ್ತಿಗಳ ನಂತರ ಮತ್ತೆ ಹಾರಾಟ ಪ್ರಾರಂಭವಾಯಿತು. ಟ್ಯಾಂಪಾದಲ್ಲಿ ಇಳಿದಾಗ 3,500ಕ್ಕೂ ಹೆಚ್ಚು ಜನರು ಉತ್ಸಾಹದಿಂದ ಪೈಲಟ್ ಮತ್ತು ಪ್ರಯಾಣಿಕರನ್ನು ಸ್ವಾಗತಿಸಿದರು.

ಈ ವಿಮಾನದ ಇನ್ನೊಂದು ಮಾದರಿ 14-Benoist Airboat ವಿಮಾನವು ಗಂಟೆಗೆ 103 ಕಿಲೋಮೀಟರ್ ವೇಗವನ್ನು ತಲುಪುತ್ತಿತ್ತು. ಮೊದಲು ಹರಾಜು ಮಾಡಿದ್ದ ಟಿಕೆಟ್‌ಗೆ ನಂತರದ ದಿನಗಳಲ್ಲಿ ಬೆಲೆ ನಿಗದಿಯಾಯಿತು. ಆಗ ದರವು ಕೇವಲ ಐದು ಡಾಲರ್ (ಪ್ರಸ್ತುತ ಮೌಲ್ಯದಲ್ಲಿ ಸುಮಾರು ಏಳು ಸಾವಿರ ರೂಪಾಯಿಗಳು) ಆಗಿತ್ತು. ದಿನಕ್ಕೆ ಎರಡು ಬಾರಿ, ವಾರದಲ್ಲಿ 6 ದಿನಗಳು ಈ ಸೇವೆ ಲಭ್ಯವಿತ್ತು. ಪೈಲಟ್ ಟೋನಿ ಜಾನಸ್ ಅವರ ಸಹೋದರ ರೋಜರ್ ಜಾನಸ್ ಕೂಡ ಈ ಹಾರಾಟಗಳನ್ನು ನಡೆಸಿದ್ದರು. ಒಟ್ಟು ನಾಲ್ಕು ತಿಂಗಳ ಕಾಲ ಚಾಲ್ತಿಯಲ್ಲಿದ್ದ ಈ ವಿಮಾನ ಸೇವೆಯಲ್ಲಿ 1,205 ಮಂದಿ ಪ್ರಯಾಣಿಕರು ಪ್ರಯಾಣಿಸಿದ್ದರು. ಹೀಗೆ ಒಂದು ಸಣ್ಣ ಧೈರ್ಯದ ಹಾರಾಟವು ಇಂದು ನಾವು ಕಾಣುವ ಲಕ್ಷಾಂತರ ವಿಮಾನಗಳ ದೊಡ್ಡ ಉದ್ಯಮಕ್ಕೆ ಬುನಾದಿ ಹಾಕಿತು. ಆ ನೂರು ವರ್ಷಗಳ ಹಿಂದಿನ ಆರು ಲಕ್ಷದ ಟಿಕೆಟ್ ಮತ್ತು ಪ್ರಯಾಣಿಗ ಫಿಲ್ ಇಂದಿಗೂ ಆಕಾಶಯಾನ ಇತಿಹಾಸದಲ್ಲಿ ಸ್ಮರಣೀಯವಾಗಿ ಉಳಿದಿದ್ದಾರೆ. ಆಕಾಶದಲ್ಲಿ ಮೊದಲ ಹೆಜ್ಜೆ ಇಟ್ಟ ಆ ಧೈರ್ಯಶಾಲಿ ಪ್ರಯಾಣಿಕನಿಗೆ ಮತ್ತು ಹಾರಾಟ ನಡೆಸಿದ ಪೈಲೆಟ್‌ಗೆ ನಮನವನ್ನು ಸಲ್ಲಿಸಲೇಬೇಕು ಅಲ್ಲವೇ?

**– ಕೆ.ಪಿ.ಅಶ್ವಿನ್** ರಾವ್

# ಭಾರತ 564 ರನ್‌ಗೆ ಮೊದಲ ಇನ್ನಿಂಗ್ಸ್ ಡಿಕ್ಲೇರ್

## ರಿಷಬ್ ಪಂತ್ ಲಾಫ್ಟೆಡ್ ಶಾಟ್‌ಗೆ ಧರೆಗುರುಳಿದ ಡ್ರೋನ್। ಆಫ್ಘಾನಿಸ್ಥಾನ 113ಕ್ಕೆ 5

• ಪ್ರಜೋದಯ ವರದಿ

**ಮುಲ್ಲಾನ್‌ಪುರ:** ಅಫ್ಘಾನಿಸ್ಥಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದ ಎರಡನೇ ದಿನ ಭಾರತ ತಂಡದ ವಿಕೆಟ್‌ಕೀಪರ್-ಬ್ಯಾಟರ್ ರಿಷಭ್ ಪಂತ್ ಅಪರೂಪದ ಘಟನೆಯೊಂದಕ್ಕೆ ಕಾರಣರಾದರು.

ನ್ಯೂ ಚಂಡಿಗಢದ ಮುಲ್ಲನ್‌ಪುರ್‌ನ ಪಂಜಾಬ್ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಈ ಘಟನೆ ನಡೆದಿದ್ದು, ಒಂದೆಡೆ ಆಫ್ಘನ್ ಬೌಲರ್‌ಗಳನ್ನು ಕಾಡುತ್ತಿದ್ದ ಭಾರತದ ರಿಷಬ್ ಪಂತ್ ಅದನ್ನು ಸೆರೆ ಹಿಡಿಯಲು ಬಂದ ಡ್ರೋನ್‌ಗೂ ಆಘಾತ ನೀಡಿದ್ದಾರೆ ಎನ್ನಲಾಗಿತ್ತು.

ಭಾರತದ ಮೊದಲ ಇನ್ನಿಂಗ್ಸ್ ವೇಳೆ ಈ ಘಟನೆ ನಡೆದಿದ್ದು, ಇನ್ನಿಂಗ್ಸ್‌ನ 74 ಓವರ್‌ನಲ್ಲಿ ಪಂತ್ ಬಾರಿಸಿದ ಶಾಟ್ ಡ್ರೋನ್‌ಗೆ ತಗುಲಿ ಅದು ನೆಲಕ್ಕುರುಳಿದೆ.

ಪಂತ್ ಬಾರಿಸಿದ ಭರ್ಜರಿ ಲಾಫ್ಟೆಡ್ ಶಾಟ್ ಮೈದಾನದ ಮೇಲ್ಭಾಗದಲ್ಲಿ ಹಾರಾಡುತ್ತಿದ್ದ ಡ್ರೋನ್‌ಗೆ ತಾಗಿ ಅದನ್ನು ನೆಲಕ್ಕುರುಳಿಸಿದೆ ಎನ್ನಲಾದ ವಿಡಿಯೋ ವೈರಲ್ ಆಗಿತ್ತು. ಇದು ನಿಂದ ಮಾಡಿದ ವಿಡಿಯೋ ಎಂದು ಸಾಬೀತಾಗಿದೆ.

ಆ ಇನ್ನಿಂಗ್ಸ್ ನಲ್ಲಿ 81 ರನ್‌ಗಳ ಉಪಯುಕ್ತ ಇನ್ನಿಂಗ್ಸ್ ಆಡಿದ ಪಂತ್, ಭಾರತದ ಮೊದಲ ಇನ್ನಿಂಗ್ಸ್ ಅನ್ನು 564 ರನ್‌ಗಳ ಬೃಹತ್ ಮೊತ್ತದತ್ತ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರವಹಿಸಿದರು.




ಇದಕ್ಕೂ ಮೊದಲು ಶುಭ್‌ಮನ್ ಗಿಲ್ ಹಾಗೂ ಕೆ.ಎಲ್.ರಾಹುಲ್ ಅವರ ಶತಕಗಳ ನೆರವಿನಿಂದ ಆತಿಥೇಯ ಭಾರತ ಅಫ್ಘಾನಿಸ್ತಾನ ವಿರುದ್ಧ ಬೃಹತ್ ಮೊತ್ತ ದಾಖಲಿಸಿತು. ಭಾರತ 8 ವಿಕೆಟ್ ನಷ್ಟಕ್ಕೆ 564 ರನ್ ಗೆ ತನ್ನ ಮೊದಲ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ಭಾರತದ ಪರ ಕೆ.ಎಲ್.ರಾಹುಲ್ (100), ನಾಯಕ ಶುಭ್‌ಮನ್ ಗಿಲ್ (126) ಶತಕ ಸಿಡಿಸಿದರೆ, ರಿಷಬ್ ಪಂತ್ (81), ವಾಷಿಂಗ್ಟನ್ ಸುಂದರ್ (ಅಜೇಯ 52) ಅರ್ಧಶತಕ ಸಿಡಿಸಿದರು.

ಆಫ್ಘಾನಿಸ್ಥಾನ

ಭಾರತ ಇನ್ನಿಂಗ್ಸ್ ಡಿಕ್ಲೇರ್ ಮಾಡುತ್ತಲೇ ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿದ ಆಫ್ಘಾನಿಸ್ತಾನ ಭಾರತದ ಉದಯೋನ್ಮುಖ ಬೌಲರ್ ಮಾನವ್ ಸುತರ್ ಅವರ ಬೌಲಿಂಗ್ ದಾಳಿಗೆ ತತ್ತರಿಸಿತು. ಕೇವಲ 62 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಆರಂಭಿಕರಾದ ಅಬ್ದುಲ್ ಮಲಿಕ್ (16), ಸೆದಿಕುಲ್ಲಾ ಅಟಲ್ (17) ಬೇಗನೆ ವಿಕೆಟ್ ಒಪ್ಪಿಸಿದರು. ಅನುಭವಿ ರೆಹಮನುಲ್ಲಾ ಗುರ್ಬಾಜ್ ಕೂಡ ಕೇವಲ 12 ರನ್ ಗಳಿಸಿ ಔಟಾದರೆ, ನಾಯಕ ಹಷ್ಮತುಲ್ಲಾ ಶಾಹಿದಿ 20 ರನ್ ಗಳಿಸಿ ಪ್ರಸಿದ್ಧ್ ಕೃಷ್ಣಗೆ ವಿಕೆಟ್ ಒಪ್ಪಿಸಿದರು. ವಿಕೆಟ್ ಕೀಪರ್ ಬ್ಯಾಟರ್ ಅಫ್ಸರ್ ಝುಝಾಯ್ 3 ರನ್‌ಗಳಿಸಿ ಮಾನವ ಸುತರ್‌ಗೆ ವಿಕೆಟ್ ಒಪ್ಪಿಸಿದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೆ, ಮತ್ತೊಂದೆಡೆ ಮಧ್ಯಮ ಕ್ರಮಾಂಕದಲ್ಲಿ ರೆಹಮತ್ ಶಾ ಅಜೇಯ 43 ರನ್ ಗಳಿಸಿ ಮೂರನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಭಾರತ ಪ್ರಥಮ ಇನ್ನಿಂಗ್ಸ್ 127 ಓವರ್‌ಗಳಲ್ಲಿ 564/8, ಶುಭಮನ್ ಗಿಲ್ 126, ಕೆ.ಎಲ್.ರಾಹುಲ್ 100, ಪಂತ್ 81, ಸುದರ್ಶನ್ 81, ವಾಶಿಂಗ್ಟನ್ ಸುಂದರ್ ಅಜೇಯ 52, ಮೊಹಮ್ಮದ್ ಸಲೀಂ 140ಕ್ಕೆ 6.

ಅಫ್ಘಾನಿಸ್ಥಾನ 39.5 ಓವರ್ ಗಳಲ್ಲಿ 113/5, ರಹ್ಮತ್ ಶಾ ಅಜೇಯ 43, ಹಶ್ಮತುಲ್ಲಾ ಶಹಿದಿ 20, ಸಾದಿಕುಲ್ಲಾ ಅಟಲ್ 17, ಮಾನವ್ ಸೂತರ್ 21ಕ್ಕೆ 3, ಪ್ರಸಿದ್ಧ ಕೃಷ್ಣ 27ಕ್ಕೆ 2.

## ಅಸಾಧ್ಯವಾದುದನ್ನು ಸಾಧ್ಯವಾಗಿಸಿದ ಹೆಮ್ಮೆ ಇದೆ

• ಪ್ರಜೋದಯ ವರದಿ

**ಬೇಲೂರು:** ರಸ್ತೆ ಸಂಪರ್ಕ ಅಸಾಧ್ಯ ಎನ್ನುವಂತಹ ಗ್ರಾಮಗಳನ್ನು ಆದ್ಯತೆಯಾಗಿ ಪರಿಗಣಿಸಿ ಕಾಮಗಾರಿ ಕೈಗೊಳ್ಳುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಒಳಿತು ಮಾಡುವ ಮನಸ್ಸಿರುವವರಿಗೆ ಯಾವುದೂ ಅಸಾಧ್ಯವಲ್ಲವೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ತಾಲ್ಲೂಕಿನ ಮದಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮದಘಟ್ಟ-ಯಡೇಹಳ್ಳಿ, ಪಡುವಳಲು ಗ್ರಾಮಗಳಲ್ಲಿ ಎತ್ತಿನಹೊಳೆ ನೀರಾವರಿ ಯೋಜನೆಯಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮದಘಟ್ಟ ಗ್ರಾಮ ಪಂಚಾಯಿತಿಯ ಮೂರು ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಸಚಿವರೊಂದಿಗೆ ಚರ್ಚಿಸಿ 63 ಲಕ್ಷ ರೂ. ಅನುದಾನ ಮಂಜೂರು ಮಾಡಿಸಿ ರಾಜ್ಯ ಹೆದ್ದಾರಿ ಕಾಮೇನಹಳ್ಳಿಯಿಂದ ತಾರಿಮರದ ವರೆಗಿನ ಸಂಪರ್ಕದ 6 ಕಿ.ಮೀ. ರಸ್ತೆಯನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಲೋಕೋಪಯೋಗಿ ಇಲಾಖೆಗೆ ಸೇರಿದ ಬಾಕಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಬುದ್ಧ ವಿಹಾರ ಸಮೀಪದ ರಸ್ತೆ ಕಾಮಗಾರಿಗೂ ಚಾಲನೆ ನೀಡಿದ್ದು, ಆದ್ಯತೆ ಮೇರೆಗೆ ಕೆಲಸ ನಡೆಯುತ್ತಿದೆ ಎಂದರು.



ಚುನಾವಣೆಗೂ ಮೊದಲು ಸಾರ್ವಜನಿಕರಿಗೆ ನಾನು ಭರವಸೆ ಕೊಟ್ಟಂತೆ ಕೆಲಸ ಮಾಡುತ್ತಿದ್ದೇನೆ. ರಸ್ತೆ ಮಾಡಲು ಸಾಧ್ಯವೇ ಇಲ್ಲ ಎನ್ನುವಂತಹ ಸ್ಥಿತಿಯಲ್ಲಿದ್ದ ಗ್ರಾಮಗಳನ್ನು ಗುರುತಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ವಿಶ್ವಗುರು ಬಸವಣ್ಣನವರ ಕಾಯಕವೇ ಕೈಲಾಸ ತತ್ವದಂತೆ ಕೆಲಸ ಮಾಡುತ್ತಿದ್ದೇನೆಂದರು.

ಕ್ಷೇತ್ರದ ಯಾವುದೇ ಗ್ರಾಮಕ್ಕೆ ಭೇಟಿ ನೀಡಿದರೂ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ರುತ್ತಾರೆ. ತಾಯಿ, ತಂಗಿ ಮತ್ತು ಅಕ್ಕನ ಸ್ಥಾನದಲ್ಲಿ ನಿಂತು ಎಲ್ಲರೂ ಆಶೀರ್ವಾದ ಮಾಡುತ್ತಿದ್ದಾರೆ. ಅವರ ಆಶೀರ್ವಾದವೇ ಈ ಅಭಿವೃದ್ಧಿ ಕಾರ್ಯಗಳಿಗೆ ಪ್ರೇರಣೆಯಾಗಿದೆ ಎಂದರು.

ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ್ ಬಹುಜನ್ ಅವರು ಮಾತನಾಡಿ, ಚುನಾವಣೆ ಮುಗಿದ ನಂತರ ಶಾಸಕರಾದವರು ಪಕ್ಷ, ಭೇದವಿಲ್ಲದೆ ಕ್ಷೇತ್ರದಲ್ಲಿ ಶಾಸಕರಾಗಿ ರುತ್ತಾರೆ. ಶಾಸಕ ಹೆಚ್.ಕೆ.ಸುರೇಶ್ ಅವರು ಚುನಾವಣೆಗೂ ಮೊದಲು ಪಡುವಳಲು-ಯಡೇಹಳ್ಳಿ ಗ್ರಾಮಗಳ ನಿವಾಸಿಗಳಿಗೆ ಮತ್ತು ಇಲ್ಲಿನ ಶಾಲೆಗೆ ನೀಡಿದ್ದ ಆಶ್ವಾಸನೆ ಈಡೇರಿಸುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಕ್ಷೇತ್ರದ ಎಲ್ಲಾ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಿ ಎಂದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹರೀಶ್, ಗ್ರಾಮಸ್ಥರಾದ ಶಿವಯ್ಯ, ಚಂದನ್, ಉಮೇಶ್, ಚಂದ್ರಣ್ಣ, ದರ್ಶನ್, ಬಸವರಾಜು, ತೀರ್ಥಪ್ರಸಾದ್, ಕಿರಣ್, ಭಾರತಿ, ಲಾಸ್ಯ ಇತರರಿದ್ದರು.

## ತೆಲಂಗಾಣ ಟಿ-20 ಪಂದ್ಯ: ತಿಲಕ್, ಸಿರಾಜ್ ದೊಡ್ಡ ಮೊತ್ತಕ್ಕೆ ಬಿಕರಿ

• ಪ್ರಜೋದಯ ವರದಿ



**ಹೈದರಾಬಾದ್:** ತೆಲಂಗಾಣ ಟಿ-20 ಲೀಗ್‌ನ ಚೊಚ್ಚಲ ಸರಣಿಗಾಗಿ ನಡೆದ ಆಟಗಾರ ಬಿಡ್ಡಿಂಗ್‌ನಲ್ಲಿ ಭಾರತ ಟಿ-20 ಕ್ರಿಕೆಟ್ ತಂಡದ ಉಪನಾಯಕ ತಿಲಕ್ ವರ್ಮಾ ಮತ್ತು ವೇಗಿ ಮೊಹಮ್ಮದ್ ಸಿರಾಜ್ ಅತಿ ಹೆಚ್ಚು ಬೆಲೆಗೆ ಬಿಕರಿಯಾಗಿದ್ದಾರೆ.

ತಿಲಕ್ ವರ್ಮಾ ಅವರಿಗೆ ಮೇದಕ್ ಫಾಲ್ಕನ್ಸ್ ತಂಡವು 33 ಲಕ್ಷ ನೀಡಿ ಖರೀದಿಸಿದೆ. ಸಿರಾಜ್ ವಾರಂಗಲ್ ವಾರಿಯರ್ಸ್ ತಂಡ ಸೇರಿದ್ದು, 14 ಲಕ್ಷ ಕೊಟ್ಟು ಖರೀದಿಸಲಾಗಿದೆ. ಐದು ಟಿ-20 ಪಂದ್ಯಗಳಿಗಾಗಿ ಐರ್ಲೆಂಡ್ ಮತ್ತು ಇಂಗ್ಲೆಂಡ್ ಪ್ರವಾಸಕ್ಕೆಗೊಳ್ಳಲಿರುವ ಶ್ರೇಯಸ್ ಅಯ್ಯರ್ ನೇತೃ ತ್ವದ ಭಾರತ ಕ್ರಿಕೆಟ್ ತಂಡದ ಉಪನಾಯಕರಾಗಿ ತಿಲಕ್ ವರ್ಮಾ ಅವರನ್ನು ಶನಿವಾರ ನೇಮಕ ಮಾಡಲಾಗಿದೆ.

ಆಲ್ ರೌಂಡರ್ ಸಿವಿ ಮಿಲಿಂದ್ ದುಬಾರಿ ಬೆಲೆಗೆ ಬಿಕರಿಯಾದ ಅನ್‌ಕ್ಯಾಪ್ಡ್ ಆಟಗಾರರಾಗಿದ್ದು, ಅನ್ವಿತಾ ಖಮ್ಮಮ್ ಏಸಸ್ ಅವರನ್ನು 17 ಲಕ್ಷ ನೀಡಿ ಖರೀದಿಸಿದೆ.

ತೆಲಂಗಾಣ ಟಿ-20 ಲೀಗ್ ಜೂನ್ 21 ರಂದು ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆರಂಭವಾಗಲಿದ್ದು, 21ದಿನಗಳ ಟೂರ್ನಿಯಲ್ಲಿ 8ತಂಡಗಳು 32ಪಂದ್ಯಗಳನ್ನು ಆಡಲಿವೆ.

## ಮುದುಡಿ ಗ್ರಾಮದಲ್ಲಿ ಶ್ರೀನಿವಾಸ ಕಲ್ಯಾಣ ಮಹೋತ್ಸವ

• ಪ್ರಜೋದಯ ವರದಿ


**ಅರಸೀಕೆರೆ:** ತಾಲ್ಲೂಕಿನ ಗಂಡಸಿ ಹೋಬಳಿ ಮುದುಡಿ ಗ್ರಾಮದಲ್ಲಿ ಶ್ರೀನಿವಾಸ ಕಲ್ಯಾಣ ಮಹೋತ್ಸವ ಅರ್ಥಪೂರ್ಣವಾಗಿ ನೆರವೇರಿತು.

ಶ್ರೀ ವೀರಾಂಜನೇಯ ಸ್ವಾಮಿ ಟ್ರಸ್ಟ್, ಬೆಂಗಳೂರಿನ ಶ್ರೀವಾರಿ ಫೌಂಡೇಶನ್ ಮತ್ತು ಮೈಸೂರಿನ ಕಲ್ಪವೃಕ್ಷ ಟ್ರಸ್ಟ್ ಹಾಗು ಗ್ರಾಮಸ್ಥರ ಸಹಕಾರದಲ್ಲಿ ಕಾರ್ಯಕ್ರಮ ನೆರವೇರಿತು. ಶನಿವಾರ ರಾತ್ರಿ 7 ಗಂಟೆಗೆ ಗ್ರಾಮ ದೇವತೆ ಶ್ರೀ ಕೋಟೆ ಮಾರಮ್ಮ ದೇವಿ ಅವರನ್ನು ಶ್ರೀನಿವಾಸ ಕಲ್ಯಾಣ ಮಹೋತ್ಸವ ಮಂಟಪದ ಬಳಿಗೆ ಆಹ್ವಾನಿಸಿ ವೀರಾಂಜನೇಯ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಗುಂಡೂರಾವ್ ಅವರಿಂದ ಧ್ವಜಾರೋಹಣದ ನಂತರ ಭಜನೆ, ದೇವರನಾಮ, ಭಕ್ತಿಗೀತೆ, ಕೀರ್ತನೆ, ಗೋವಿಂದನ ಸಹಸ್ರನಾಮಾವಳಿಯ ಬಿರುದಾವಳಿಯೊಂದಿಗೆ ಆಗಮಿಕ ಅರ್ಚಕರು ಮತ್ತು ಪುರೋಹಿತರ ತಂಡದಿಂದ ಶ್ರದ್ಧಾ ಭಕ್ತಿಯಿಂದ ಮಹೋತ್ಸವ ನಡೆಸಲಾಯಿತು.

ಶ್ರೀವಾರಿ ಫೌಂಡೇಶನ್‌ನ ವೆಂಕಟೇಶಮೂರ್ತಿ ಅವರು ಮಾತನಾಡಿ, ಶ್ರೀನಿವಾಸ ಸ್ವಾಮಿ ಕೈಲಾಸದಿಂದ ನೇರವಾಗಿ ಭೂಲೋಕದ ಮುದುಡಿ ಗ್ರಾಮಕ್ಕೆ ಆಗಮಿಸಿದ್ದ ಎಂಬುದಕ್ಕೆ ಪ್ರತೀತಿ ಇದೆ. ತಿರುಪತಿಗೆ ಹೋಗಿ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡಲು ಸಾಧ್ಯ ವಾಗದವರಿಗೆ ಅನುಕೂಲವಾಗಲಿ ಎಂದು ಶ್ರೀನಿವಾಸ ಇಲ್ಲಿಯೇ ನೆಲೆಸಿದ್ದಾನೆ. ಭಕ್ತರ ಇಷ್ಟಾರ್ಥಗಳನ್ನು ದೇವರು ಈಡೇರಿಸುತ್ತಾನೆಂದರು.

ಶ್ರೀ ವೀರಾಂಜನೇಯ ಸ್ವಾಮಿ ಟ್ರಸ್ಟ್ ವತಿಯಿಂದ ಮೈಸೂರು-ಶಿವಮೊಗ್ಗಾ ರಸ್ತೆಯ ಮುದುಡಿ ಗ್ರಾಮದ ಬಳಿ ಶ್ರೀ ರಾಘವೇಂದ್ರ ಸ್ವಾಮಿ ಮಠ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಾಲಯ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿದ್ದು 3 ಕೋಟಿ ರೂ. ವೆಚ್ಚದಲ್ಲಿ ಭವ್ಯ ದೇಗುಲ ತಲೆ ಎತ್ತಲಿದೆ ಎಂದರು.

ಕಲ್ಪವೃಕ್ಷ ಟ್ರಸ್ಟ್ ಅಧ್ಯಕ್ಷ ನಾಗೇಂದ್ರ, ಕಾರ್ಯದರ್ಶಿ ಗುರುಪ್ರಸಾದ್ ಮತ್ತಿತರರಿದ್ದರು.



## 3 ದಿನ ಬಿಹಾರ ಪ್ರವಾಸ ಕೈಗೊಂಡ ಮೋಹನ್ ಭಾಗವತ್

• ಪ್ರಜೋದಯ ವರದಿ

**ಪಟ್ನಾ:** ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಮೂರು ದಿನಗಳ ಬಿಹಾರ ಪ್ರವಾಸ ಕೈಗೊಂಡಿದ್ದು, ಪಟ್ನಾಗೆ ಭಾನುವಾರ ಬಂದಿಳಿದರು.

ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ಭಾಗವತ್ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಜೂನ್ 9ರ ವರೆಗೆ ಭಾಗವತ್ ಅವರು ಮುಂಗೇರ್‌ನಲ್ಲಿ ತಂಗಲಿದ್ದಾರೆ.

ಮುಂಗೇರ್‌ನಲ್ಲಿ ನಡೆಯುತ್ತಿರುವ ಸಂಘ ಶಿಕ್ಷಾ ವರ್ಗ ಹಾಗೂ ವಿವಿಧ ತರಬೇತಿ ಶಿಬಿರಗಳಲ್ಲಿ ಭಾಗವಹಿಸಲಿರುವ ಭಾಗವತ್ ಅವರು ಸ್ವಯಂ ಸೇವಕರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಸದ್ಯ ಮುಂಗೇರ್‌ನಲ್ಲಿ ನಡೆಯುತ್ತಿರುವ ವಿವಿಧ ಶಿಬಿರಗಳಲ್ಲಿ ಸುಮಾರು 700 ಸ್ವಯಂ ಸೇವಕರು ಭಾಗವಹಿಸಿದ್ದಾರೆ. ಸಂಘಟನಾ ಸಾಮರ್ಥ್ಯ, ನಾಯಕತ್ವ ಕೌಶಲಗಳು ಹಾಗೂ ಸಾಮಾಜಿಕ ಜೀವನದಲ್ಲಿ ಸಕ್ರಿಯವಾಗಿರುವುದು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸ್ವಯಂ ಸೇವಕರಿಗೆ ತರಬೇತಿ ನೀಡಲಾಗುತ್ತದೆ ಎಂದು ಹೇಳಿವೆ.

## ಡಿಎಂಕೆಗೆ ಮಾಹಿತಿ ನೀಡಿಯೇ ಟಿವಿಕೆಗೆ ಬೆಂಬಲ: ಪಿ.ಚಿದಂಬರಂ

• ಪ್ರಜೋದಯ ವರದಿ



**ಚೆನ್ನೈ:** ಡಿಎಂಕೆಗೆ ಮಾಹಿತಿ ನೀಡಿದ ನಂತರವೇ ಕಾಂಗ್ರೆಸ್ ಪಕ್ಷವು ವಿಜಯ್ ನೇತೃತ್ವದ ಟಿವಿಕೆಗೆ ಸರ್ಕಾರ ರಚನೆಗೆ ಬೆಂಬಲ ನೀಡಿತ್ತು ಎಂದು ಪಕ್ಷದ ಹಿರಿಯ ನಾಯಕ ಪಿ.ಚಿದಂಬರಂ ಅವರು ತಿಳಿಸಿದ್ದಾರೆ.

ತಮಿಳುನಾಡು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಡಿಎಂಕೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದವು. ಫಲಿತಾಂಶದ ಬಳಿಕ ಐದು ಕ್ಷೇತ್ರಗಳಲ್ಲಿ ಗೆದ್ದಿದ್ದ ಕಾಂಗ್ರೆಸ್, ಟಿವಿಕೆ ನೇತೃತ್ವದ ಸರ್ಕಾರ ರಚನೆಗೆ ಬೆಂಬಲ ನೀಡಿತ್ತು.

ಟಿವಿಕೆ ಬಹುಮತ ಸಾಬೀತುಪಡಿಸುವಲ್ಲಿ ವಿಫಲವಾದರೆ ಮತ್ತೊಂದು ಬಾರಿ ಚುನಾವಣೆ ನಡೆಯುವ ಅಪಾಯ ಇತ್ತು. ಈ ಬಗ್ಗೆ ಎಲ್ಲಾ ಮಿತ್ರಪಕ್ಷಗಳಲ್ಲಿ ಆತಂಕ ಇತ್ತು. ಜನರಿಗೂ ಇನ್ನೊಂದು ಚುನಾವಣೆ ಬೇಡವಾಗಿತ್ತು ಎಂದು ಖಾಸಗಿ ಸುದ್ದಿವಾಹಿನಿಯೊಂದಕ್ಕೆ ಅವರು ಶನಿವಾರ ತಿಳಿಸಿದ್ದಾರೆ.

ಟಿವಿಕೆಗೆ ಬೆಂಬಲ ನೀಡುವ ಪಕ್ಷದ ನಿರ್ಧಾರದ ಬಗ್ಗೆ ಸಿಪಿಐ, ವಿಸಿಕೆ ಮತ್ತು ಐಯುಎಂಎಲ್ ಸೇರಿ ಎಲ್ಲಾ ಮಿತ್ರಪಕ್ಷಗಳಿಗೆ ತಿಳಿಸಲಾಗಿತ್ತು. ಇತರೆ ಮಿತ್ರಪಕ್ಷಗಳು ಒಂದು ದಿನ ತಡವಾಗಿ ಘೋಷಿಸಿದವು, ನಾವು ಮುಂಚೆಯೇ ಘೋಷಿಸಿದ್ದೆವು ಅಷ್ಟೇ ಎಂದು ಅವರು ತಿಳಿಸಿದ್ದಾರೆ.

ಮೈತ್ರಿ ಪತನದ ಬಳಿಕ ಉದಯನಿಧಿ ಸ್ಟಾಲಿನ್ ನೇತೃತ್ವದ ಡಿಎಂಕೆ ಯುವ ಘಟಕವು, ಡಿಎಂಕೆಗೆ ಕಾಂಗ್ರೆಸ್ ದ್ರೋಹ ಬಗೆದಿದೆ ಎಂಬ ನಿರ್ಣಯವನ್ನು ಅಂಗೀಕರಿಸಿತ್ತು.

## ಸಿಇಟಿ ಫಲಿತಾಂಶ: ಹಂಸಿತಗೆ 762ನೇ ರ್‍ಯಾಂಕ್

• ಪ್ರಜೋದಯ ವರದಿ



**ಅರಸೀಕೆರೆ:** ದ್ವಿತೀಯ ಪಿಯು ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದ ಕೆಪಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಕೆ.ಹಂಸಿತ ಅವರು ಸಿಇಟಿ ಇಂಜಿನೀಯರಿಂಗ್ ವಿಭಾಗದಲ್ಲಿ 762ನೇ ರ್‍ಯಾಂಕ್ ಗಳಿಸುವ ಮೂಲಕ ಸಾಧನೆ ಮಾಡಿದ್ದಾರೆ.



ಅದೇ ಕಾಲೇಜಿನ ಎಂ.ಆರ್.ಧನ್ಯ ಅವರು 1362ನೇ ರ್‍ಯಾಂಕ್ ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. 2026ರ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ ಹಂಸಿತ ಅವರು 597 ಅಂಕ ಗಳಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದರು. ಈ ಹಿಂದೆ ಇದೇ ಕಾಲೇಜಿನ ವಿದ್ಯಾರ್ಥಿನಿ ಛಾಯಾ ಅವರು 596 ಅಂಕಗಳೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದರು. ಒಂದೇ ಕಾಲೇಜಿನಿಂದ ಎರಡು ಬಾರಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ನೀಡಿರುವುದು ಕೆಪಿಎಸ್ ಪಿಯು ಕಾಲೇ ಜಿನ ಶೈಕ್ಷಣಿಕ ಗುಣಮಟ್ಟ ಮತ್ತು ಸಾಧನೆಗೆ ಸಾಕ್ಷಿಯಾಗಿದೆ ಎಂದು ಶಿಕ್ಷಣ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗಿದೆ.

ಈ ಸಾಲಿನಲ್ಲಿ ಎಂ.ಆರ್.ಧನ್ಯ ಹಾಗು ಗೀತಾ ಅವರು ತಲಾ 595 ಅಂಕಗಳನ್ನು ಗಳಿಸಿ ವಿಶಿಷ್ಟ ಸಾಧನೆ ಮೆರೆದಿದ್ದಾರೆ. ಕಾಲೇಜಿನ 65ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ.95 ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ್ದು, ಶೈಕ್ಷಣಿಕ ಸಾಧನೆಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಒಟ್ಟು 300 ವಿದ್ಯಾರ್ಥಿಗಳಲ್ಲಿ 238 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ.

## ಎಲ್‌ಪಿಜಿ ದರ ಏರಿಕೆ: ಕೇಂದ್ರ ಸರ್ಕಾರ ಬೆಲೆ ತೆರಬೇಕಾಗುತ್ತದೆ

• ಪ್ರಜೋದಯ ವರದಿ

**ಕೊಲ್ಹಾಪುರ:** ನಿರಂತರವಾಗಿ ಹೆಚ್ಚುತ್ತಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯರು ಕಂಗೆಟ್ಟಿದ್ದು, ಈ ಜನವಿರೋಧಿ ನೀತಿಗಾಗಿ ಕೇಂದ್ರ ಸರ್ಕಾರವು ಭಾರಿ ರಾಜಕೀಯ ಬೆಲೆ ತೆರಬೇಕಾಗುತ್ತದೆಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ದೇಶದಾದ್ಯಂತ ಜನಸಾಮಾನ್ಯರು ಹಣದುಬ್ಬರದಿಂದಾಗಿ ತತ್ತರಿಸಿ ಹೋಗಿದ್ದಾರೆ. ಪರಿಸ್ಥಿತಿ ಹೀಗಿದ್ದರೂ ಬೆಲೆ ಏರಿಕೆ ನಿಯಂತ್ರಣದಲ್ಲಿದೆ ಎಂದು ಹೇಳಿಕೊಳ್ಳುತ್ತಿರುವ ಕೇಂದ್ರ ಸರ್ಕಾರದ ನಿಲುವನ್ನು ಮಾಜಿ ಕೇಂದ್ರ ಸಚಿವರಾದ ಶರದ್ ಪವಾರ್ ತೀವ್ರವಾಗಿ ಪ್ರಶ್ನಿಸಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂಧನ ದರ ಏರಿಕೆಯ ನೆಪವೊಡ್ಡಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಮತ್ತೆ 29 ರೂ. ಹೆಚ್ಚಳ ಮಾಡಿವೆ. ಕಳೆದ ಮೂರು ತಿಂಗಳ ಅವಧಿಯಲ್ಲಿ ಸಿಲಿಂಡರ್ ದರ ಏರಿಕೆಯಾಗುತ್ತಿರುವುದು ಇದು ಎರಡನೇ ಬಾರಿ. ಇದಕ್ಕೂ ಮುನ್ನ, ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಜಾಗತಿಕ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾದ ಹಿನ್ನಲೆಯಲ್ಲಿ ಮಾರ್ಚ್ 7ರಂದು ಸಿಲಿಂಡರ್ ದರವನ್ನು 60 ಹೆಚ್ಚಿಸಲಾಗಿತ್ತು.



ಇತ್ತೀಚಿನ ಎಲ್‌ಪಿಜಿ ದರ ಏರಿಕೆ ಕುರಿತು ಪ್ರತಿಕ್ರಿಯಿಸಿದ ಶರದ್ ಪವಾರ್, ದೇಶದಲ್ಲಿ ಹಣದುಬ್ಬರವನ್ನು ನಿಯಂತ್ರಿಸಲಾಗುತ್ತಿದೆಂದು ಪ್ರಧಾನಿ ಹೇಳುತ್ತಿದ್ದಾರೆ. ಅವರ ನಿಯಂತ್ರಣ ಎಂದರೆ ಜನರಿಗೆ ಹಂತ ಹಂತವಾಗಿ ಶಾಕ್ ನೀಡುವುದು ಎಂದರ್ಥ. ಈ ದುಬಾರಿ ಬೆಲೆ ಏರಿಕೆಗೆ ಕಾರಣರಾದವರು ಮುಂದಿನ ದಿನಗಳಲ್ಲಿ ತಕ್ಕ ರಾಜಕೀಯ ಬೆಲೆ ತೆರಬೇಕಾಗುತ್ತದೆಂದು ಆಕ್ರೋಶ ಹೊರಹಾಕಿದ್ದಾರೆ.

## ಸೌಟ್ಸ್-ಗೈಡ್ಸ್ ನಿರಂತರವಾಗಿ ಪರಿಸರ ಉಳಿಸುವ ಕಾಯಕ ಮಾಡುತ್ತಿವೆ

• ಪ್ರಜೋದಯ ವರದಿ

**ಆಲೂರು:** ಭಾರತ್ ಸ್ಕೌಟ್ಸ್-ಗೈಡ್ಸ್ ವರ್ಷವಿಡಿ ಪ್ರಕೃತಿಯ ಸೇವಾ ಕೈಂಕರ್ಯದಲ್ಲಿ ತೊಡ ಗಿರುತ್ತದೆಂದು ಭಾರತ್ ಸ್ಕೌಟ್ಸ್-ಗೈಡ್ಸ್ ಆಲೂರು ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್. ಉಪ್ಪಾರ್ ಅವರು ತಿಳಿಸಿದರು.

ಬೈರಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸ್ಕೌಟ್ಸ್-ಗೈಡ್ಸ್ ಘಟಕಗಳ ಸಂಯುಕ್ತಾಶ್ರ ಯದಲ್ಲಿ ಏರ್ಪಡಿಸಲಾಗಿದ್ದ ಪರಿಸರ ದಿನಾಚರಣೆಯಲ್ಲಿ ಗಿಡ ನೆಡುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಹಸಿರು ನಿರ್ಮಾಣ ನಿರಂತರ ಪ್ರಕ್ರಿಯೆಯಾಗಬೇಕು. ಭಾರತ್ ಸ್ಕೌಟ್ಸ್-ಗೈಡ್ಸ್ ಪರಿಸರ ದಿನಾಚರಣೆಯನ್ನು ಕೇವಲ ವೇದಿಕೆಗೆ ಸೀಮಿತಗೊಳಿಸದೆ ಕಾಯಕವನ್ನಾಗಿಸಿಕೊಂಡಿದೆ. ಗಿಡ ನೆಡುವ ಕಾರ್ಯಕ್ರಮಗಳು, ಬೀಜದುಂಡೆಗಳ ತಯಾರಿಕೆ, ಕಲ್ಯಾಣಿಗಳ ಸ್ವಚ್ಛತೆ, ದೇವಾಲಯಗಳ ಸ್ವಚ್ಛತೆ ಹೀಗೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಮಾಡುತ್ತಾ ಸಮಾಜಕ್ಕೆ ಮಾದರಿಯಾಗಿದೆ ಎಂದರು.

ಏಕಲವ್ಯ ರೋವರ್ ಮುಕ್ತದಳದ ನಾಯಕ ಆರ್.ಜಿ.ಗಿರೀಶ್ ಮಾತನಾಡಿ, ಸ್ಕೌಟ್ಸ್-ಗೈಡ್ಸ್ ಸಂಸ್ಥೆ ಅರಣ್ಯ ಇಲಾಖೆಯ ಸಹಕಾರ ಹಾಗೂ ವಿವಿಧ ಸಂಘಟನೆಗಳ ಸಹಕಾರದಲ್ಲಿ ಪ್ರತಿ ವರ್ಷ ಮೂರರಿಂದ ಐದು ಸಾವಿರ ಗಿಡಗಳನ್ನು ಅರಣ್ಯೀಕರಣ ಮಾಡುತ್ತಿದ್ದೇವೆ. ಹಾಕಿದ ಗಿಡಗಳ ಆರೈಕೆ ಬಗ್ಗೆಯೂ ಕ್ರಮ ವಹಿಸಿದ್ದೇವೆ. ಗಿಡಗಳನ್ನು ನೆಟ್ಟಾಕ್ಷಣ ನಮ್ಮ ಕೆಲಸ ಮುಗಿಯುವುದಿಲ್ಲ, ಅವುಗಳನ್ನು ಪೋಷಿಸುವ ಜವಾಬ್ದಾರಿಯು ನಮ್ಮ ಮೇಲಿದೆ ಎಂದರು.



ಸಕಲೇಶಪುರ ರೋಟರಿ ಶಾಲೆಯ ಎ.ಎಲ್.ಟಿ. ನಾಯಕಿ ಕಾಂತಾಮಣಿ ಮಾತನಾಡಿ, ಪರಿಸರ ಎಂದರೆ ಕೇವಲ ಗಿಡಮರ ಮಾತ್ರವಲ್ಲ, ನಮ್ಮ ಸುತ್ತ ಮುತ್ತಲಿರುವ ಜೈವಿಕ ಹಾಗೂ ಅಜೈವಿಕ ಅಂಶಗಳೆಲ್ಲವೂ ಪರಿಸರದ ಭಾಗಗಳಾಗಿವೆ. ಭೂಮಿ, ನೀರು, ಗಾಳಿ ಸೇರಿ ಮೂಲಭೂತ ಸಂಪನ್ಮೂಲಗಳನ್ನೆಲ್ಲಾ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಬೈರಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗೈಡ್ ನಾಯಕಿ ಅಶ್ವಿನಿ, ಲೇಡಿ ಸ್ಕೌಟ್ ಮಾಸ್ಟರ್ ರೇಣುಕಾ ಮೋಹನ್, ಎಸ್.ಪಬ್ಲಿಕ್ ಶಾಲೆಯ ಲೇಡಿ ಸ್ಕೌಟ್ ಮಾಸ್ಟರ್ ರೋಸ್ ಮೇರಿ, ಹರ್ಷಿತಾ, ಗೈಡ್ ಕ್ಯಾಪ್ಟನ್ ಚೈತ್ರ, ಝೂನ್ನಿ ವಿದ್ಯಾಸಂಸ್ಥೆಯ ಗೈಡ್ ಕ್ಯಾಪ್ಟನ್ ಪಲ್ಲವಿ, ಏಕಲವ್ಯ ಮುಕ್ತದಳದ ಗೈಡ್ ನಾಯಕಿಯರಾದ ಶಿಲ್ಪ, ಪದ್ಮಾವತಿ ವೆಂಕಟೇಶ್, ಭೂಮೇಶ್, ನಾಗರತ್ನ, ಹರ್ಷಿತ, ಸುದೀಪ್, ಅವಿನಾಶ್, ನಾರಾಯಣಗೌಡ, ಲಿಖಿತ್ ಮುಂತಾದವರು ಉಪಸ್ಥಿತರಿದ್ದರು.

## ಅಮೇರಿಕಾ-ಇರಾನ್ ನಡುವೆ ಮತ್ತೆ ಸಂಧಾನ ಮಾತುಕತೆ ಆರಂಭಿಸಲು ಮುಂದಾದ ಪಾಕ್

• ಪ್ರಜೋದಯ ವರದಿ

**ಇಸ್ಲಾಮಾಬಾದ್:** ಯುದ್ಧ ಅಂತ್ಯಗೊಳಿಸುವ ಕುರಿತಂತೆ ಅಮೇರಿಕಾ ಮತ್ತು ಇರಾನ್ ನಡುವಿನ ಸಂಧಾನ ಮಾತುಕತೆ ಮತ್ತೆ ಮುರಿದುಬಿದ್ದಿದೆ. ಮಾತುಕತೆಯನ್ನು ಪುನರಾರಂಭಿಸುವ ನಿಟ್ಟಿನಲ್ಲಿ ಪಾಕಿಸ್ತಾನ ಪ್ರಯತ್ನ ಮುಂದುವರಿಸಿದ್ದು, ಆಂತರಿಕ ಸಚಿವ ಮೊಹ್ಸಿನ್ ನಖ್ವಿ ಇರಾನ್‌ಗೆ ತೆರಳಿದ್ದಾರೆ.

ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿಗೆ ಪ್ರಮುಖ ಸಂದೇಶ ಹೊತ್ತು ನಖ್ವಿ ಟೆಹರಾನ್‌ಗೆ ತೆರಳಿದ್ದಾರೆಂದು ಮಾಧ್ಯಮಗಳು ವರದಿ ಮಾಡಿವೆ. ಶನಿವಾರ ರಾತ್ರಿಯೇ ಟೆಹರಾನ್ ತಲುಪಿರುವ ನಖ್ವಿಯನ್ನು ಇರಾನ್ ವಿದೇಶಾಂಗ ಸಚಿವ ಎಸ್ಕಂದರ್ ಮೊಮೊನಿ ಬರಮಾಡಿಕೊಂಡಿದ್ದಾರೆ. ಶಾಂಘೈ ಸಹಕಾರ ಸಂಘಟನೆಯ ಶೃಂಗದಲ್ಲಿ ಕಳೆದ ವಾರವಷ್ಟೇ ಉಭಯ ನಾಯಕರು ಭೇಟಿಯಾಗಿದ್ದರು.

ನಖ್ವಿ ಅವರು ಖಮೇನಿ ಅವರಿಗೆ ಪಾಕಿಸ್ತಾನದ ರಕ್ಷಣಾ ಪಡೆಗಳ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಅವರಿಂದ ಪ್ರಮುಖ ಸಂದೇಶವನ್ನು ಹೊತ್ತೊಯ್ದಿದ್ದಾರೆ ಎಂದು ಇರಾನ್‌ನ ಅಧಿಕೃತ ಸುದ್ದಿ ಸಂಸ್ಥೆ ಐಆರ್‌ಎನ್‌ಎ ವರದಿಯನ್ನು ಉಲ್ಲೇಖಿಸಿ ಡಾನ್ ಪತ್ರಿಕೆ ವರದಿ ಮಾಡಿದೆ.



ಪಾಕ್ ಮಧ್ಯಸ್ಥಿಕೆಯಲ್ಲಿ ಆಗಿರುವ ಕದನ ವಿರಾಮ ಒಪ್ಪಂದ ಮುರಿದು ಬೀಳುವುದನ್ನು ತಡೆಯಲು ಮತ್ತು ಅಮೇರಿಕಾ ಹಾಗೂ ಇರಾನ್ ನಡುವಿನ ಅರ್ಥಪೂರ್ಣ ಮಾತುಕತೆಗಳ ಪುನರಾರಂಭಕ್ಕೆ ಅವಕಾಶ ಮಾಡಿಕೊಡುವ ಪಾಕಿಸ್ತಾನದ ಪ್ರಯತ್ನಗಳ ಭಾಗವಾಗಿ ನಖ್ವಿ ಟೆಹರಾನ್‌ಗೆ ತೆರಳಿದ್ದಾರೆಂದು ರಾಜತಾಂತ್ರಿಕ ಮೂಲಗಳು ತಿಳಿಸಿವೆ.

ಇರಾನ್, ಅಮೇರಿಕಾ ಮತ್ತು ಇಸ್ರೇಲ್ ನಡುವಿನ ಹಲವು ದಿನಗಳ ಯುದ್ಧದ ನಂತರ ಏಪ್ರಿಲ್‌ನಲ್ಲಿ ಉಭಯ ದೇಶಗಳು ಯುದ್ಧ ವಿರಾಮದ ಮೂಲಕ ಮಾತುಕತೆ ನಡೆಸಲು ಮುಂದಾಗಿದ್ದವು. ಅಮೇರಿಕಾವು ತಮ್ಮ ರಕ್ಷಣೆಯ ನೆಪದಲ್ಲಿ ದಾಳಿ ನಡೆಸುತ್ತಿದ್ದರೆ, ಅತ್ತ ಇರಾನ್ ಸಹ ಗಲ್ಫ್‌ನ ಕೆಲವೆಡೆ ಡ್ರೋನ್ ದಾಳಿ ಮುಂದುವರಿಸಿದೆ. ಫೆಬ್ರುವರಿ 28ರಂದು ಅಮೇರಿಕಾ ಮತ್ತು ಇಸ್ರೇಲ್, ಇರಾನ್ ಮೇಲೆ ಜಂಟಿ ವೈಮಾನಿಕ ದಾಳಿ ನಡೆಸುವುದರೊಂದಿಗೆ ಆರಂಭವಾದ ಯುದ್ಧ ತೀವ್ರ ಸ್ವರೂಪ ಪಡೆದಿತ್ತು. ಪ್ರತಿಯಾಗಿ ಗಲ್ಫ್ ದೇಶಗಳ ಅಮೇರಿಕಾ ನೆಲೆ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದ ಇರಾನ್, ಹೊರ್ಮುಜ್ ಜಲಸಂಧಿ ಮುಚ್ಚುವ ಮೂಲಕ ಜಾಗತಿಕ ತೈಲ ಬಿಕ್ಕಟ್ಟಿಗೆ ಎಡೆಮಾಡಿದೆ. ಇದರ ಪರಿಣಾಮ, ಭಾರತ ಸೇರಿ ಗಲ್ಫ್ ತೈಲ ಆಮದಿನ ಮೇಲೆ ಅವಲಂಬಿತವಾಗಿರುವ ದೇಶಗಳಲ್ಲಿ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಮತ್ತು ನೈಸರ್ಗಿಕ ಅನಿಲದ ಬೆಲೆ ಏರಿಕೆಯಾಗಿದೆ.

## 1.5 ಕೋ.ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಬೇಲೂರು:** ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ 1.5 ಕೋಟಿ ರೂ. ಅನುದಾನದಲ್ಲಿ ತಾಲ್ಲೂಕಿನ ಕೆಸಗೋಡು ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗುತ್ತಿಗೆದಾರರು ಗುಣಮಟ್ಟ ಕಾಪಾಡಿಕೊಂಡು ಕಾಮಗಾರಿ ನಿರ್ವಹಿಸಬೇಕೆಂದು ಶಾಸಕ ಹೆಚ್.ಕೆ. ಸುರೇಶ್ ಅವರು ಸೂಚಿಸಿದರು.

ತಾಲ್ಲೂಕಿನ ಕೆಸಗೋಡು ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮಲೆನಾಡು ಭಾಗದ ಅನೇಕ ರಸ್ತೆಗಳು ಹಾಳಾಗಿದ್ದು, ಕೆಸಗೋಡು ಗ್ರಾಮಸ್ಥರ ಬಹುದಿನಗಳ ಬೇಡಿಕೆಯಂತೆ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಹೇಳಿದರು.

ಬೇಲೂರು-ಬಿಕ್ಕೋಡು-ಆಲೂರು -ಹಾಸನ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆ ಹಲವು ವರ್ಷಗಳಿಂದ ಗುಂಡಿಗಳಿಂದ ತುಂಬಿ ವಾಹನ ಸಂಚಾರ ಹಾಗು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿತ್ತು. ಗ್ರಾಮಸ್ಥರ ಅನುಕೂಲಕ್ಕಾಗಿ ಲೋಕೋಪಯೋಗಿ ಇಲಾಖೆಯ ಮೂಲಕ 1.5 ಕೋಟಿ ರೂ. ಅನುದಾನ ಮಂಜೂರು ಮಾಡಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ತಾವು ನೀಡಿದ ಭರವಸೆಯಂತೆ ಕೆಲಸ ಮಾಡುತ್ತಿರುವುದಾಗಿ ಹೇಳಿದ ಶಾಸಕ ಸುರೇಶ್, ಮುಂದಿನ ದಿನಗಳಲ್ಲಿ ಗ್ರಾಮದ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ತಂದು ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗುವುದೆಂದರು.

ಗ್ರಾಮಸ್ಥರಾದ ರೇಣುಕುಮಾರ್, ಮಲ್ಲಿಕಾರ್ಜುನ್, ಅರುಣ್, ಶಾಂತಪ್ಪ, ಸತೀಶ್, ಜಗದೀಶ್, ಶಶಿಕುಮಾರ್ ಉಪಸ್ಥಿತರಿದ್ದರು.

## ಪರಿಸರ ಸ್ವಚ್ಛತೆಗೆ ಗಿಡ ನೆಡುವುದು ಅನಿವಾರ್ಯ

• ಪ್ರಜೋದಯ ವರದಿ

**ಹಾಸನ:** ಮಾಲಿನ್ಯಗೊಳ್ಳುತ್ತಿರುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಗಿಡಗಳನ್ನು ನೆಟ್ಟು ನೀರೆರೆದು ಬೆಳೆಸುವುದು ಅನಿವಾರ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಉಂಟಾಗಬೇಕು. ನಮ್ಮ ಸುತ್ತಲ ಪರಿಸರವನ್ನು ನಾವು ಸ್ವಚ್ಛವಾಗಿಟ್ಟುಕೊಳ್ಳಬೇಕೆಂದು ಉಪಪ್ರಾಂಶುಪಾಲ ಮಂಜುನಾಥ್ ಅವರು ಹೇಳಿದರು.

ನಗರದ ಆರ್.ಸಿ.ರಸ್ತೆಯಲ್ಲಿರುವ ಜಿ.ಜಿ.ಜೆ.ಸಿ. ಪ್ರಧಾನ ಪ್ರೌಢಶಾಲಾ ವಿಭಾಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪರಿಸ್ಪರ ಸ್ವಚ್ಛತೆ ನಮ್ಮ ಆದ್ಯ ಕರ್ತವ್ಯವಾಗಬೇಕು. ಪರಿಸರ ಚೆನ್ನಾಗಿದ್ದರೆ ನಮ್ಮ ಆರೋಗ್ಯವೂ ಚೆನ್ನಾಗಿರುತ್ತದೆ ಎಂದರು.

ಶಿಕ್ಷಕರಾದ ಹೆಚ್.ಪಿ.ಮಂಜುಳಾ ಅವರು ಮಾತನಾಡಿ, ವಿಶ್ವ ಪರಿಸರ ದಿನಾಚರಣೆಯನ್ನು ಇಡೀ ವಿಶ್ವದಾದ್ಯಂತ ಇಂದು ಆಚರಿಸಲಾಗುತ್ತಿದೆ. ಕಾರಣ ಇಂದಿನ ಆಧುನಿಕ ಜಗತ್ತು ಪರಿಸರ ಮಾಲಿನ್ಯತೆಯಿಂದ ತುಂಬಿದೆ. ಮುಂದಿನ ಪೀಳಿಗೆಗೆ ಆರೋಗ್ಯಕರ ಭೂಮಿ, ನೀರು ಗಾಳಿಯನ್ನು ನಾವೆಲ್ಲರೂ ಉಳಿಸಿ ಕೊಡುಗೆಯಾಗಿ ನೀಡಬೇಕೆಂದರು.

ವಿಜ್ಞಾನ ಶಿಕ್ಷಕ ಪಿ.ಮಧು ಅವರು ಮಾತನಾಡಿ, ಜೂನ್-ಜುಲೈ ತಿಂಗಳು ಮಳೆಗಾಲವಾಗಿರುವುದರಿಂದ ಗಿಡಗಳನ್ನು ನೆಡುವುದು ಸೂಕ್ತ. ಹಾಗಾಗಿಯೇ ವಿಶ್ವಸಂಸ್ಥೆ ಜೂನ್ 5ನೇ ದಿನಾಂಕ ವನ್ನು ಪರಿಸರ ದಿನವನ್ನಾಗಿ ಗುರುತಿಸಿದೆ. ನಾವೆಲ್ಲರೂ ನಮ್ಮ ನಮ್ಮ ಮನೆಗಳಲ್ಲಿ ಇರುವಷ್ಟು ಜಾಗದಲ್ಲಿಯೇ ಔಷಧಿಯುಕ್ತ ಸಸ್ಯಗಳನ್ನು ನೆಟ್ಟು ಬೆಳೆಸಬೇಕು. ನಾವು ಪರಿಸರವನ್ನು ರಕ್ಷಿಸಿ ದರೆ, ಪರಿಸರವು ನಮ್ಮನ್ನು ರಕ್ಷಿಸತ್ತದೆ ಎಂದರು.



ಶಾಲೆಯ ಸಹ ಶಿಕ್ಷಕ ಕೆ.ಎನ್.ಚಿದಾನಂದ ಅವರು ಮಾತನಾಡಿ, 21ನೇ ಶತಮಾನದಲ್ಲಿ ಇಡೀ ಮಾನವಕುಲ ಮತ್ತು ಜೀವಸಂಕುಲವನ್ನು ಕಾಡುತ್ತಿರುವ ಅತ್ಯಂತ ಕಠಿಣ ಹಾಗೂ ಗಂಭೀರವಾದ ಸಮಸ್ಯೆ ಎಂದರೆ ಜಾಗತಿಕ ತಾಪಮಾನ ಏರಿಕೆ. ಕೈಗಾರಿಕೀಕರಣ, ನಗರೀಕರಣ ಮತ್ತು ಮಾನ ವನ ಮಿತಿಮೀರಿದ ಸ್ವಾರ್ಥದ ಪರಿಣಾಮವಾಗಿ ಭೂಮಿಯ ವಾತಾವರಣದಲ್ಲಿ ಉಷ್ಣಾಂಶವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಜಾಗತಿಕ ಜ್ವರಕ್ಕೆ ಪ್ರಮುಖ ಕಾರಣ ಮತ್ತು ಅದಕ್ಕೆ ಇರುವ ಏಕೈಕ ನೈಸರ್ಗಿಕ ಮದ್ದು ಪರಿಸರದಲ್ಲಿದೆ. ಪರಿಸರವನ್ನು ನಾಶಪಡಿಸುತ್ತಿರುವುದು ತಾಪಮಾನ ಏರಿಕೆಗೆ ಕಾರಣವಾದರೆ, ಪರಿಸರ ಸಂರಕ್ಷಣೆ ಮಾಡುವುದು ಈ ಮಹಾವಿಪತ್ತಿನಿಂದ ಬ್ರಹ್ಮಾಂಡ ವನ್ನು ಉಳಿಸುವ ದಾರಿಯಾಗಿದೆ ಎಂದರು.

ಶಿಕ್ಷಕ ರುದ್ರೇಶ್ ಮಾತನಾಡಿ, ಶಾಲೆಗಳಲ್ಲಿ ಮಕ್ಕಳಿಗೆ ಪರಿಸರದ ಅರಿವು ಮೂಡಿಸುವ ಮೂಲಕ ಶಾಲೆಯ ಒಳಗೆ ಮತ್ತು ಹೊರಗಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಎ.ವಿ.ಗೀತಾರಾಣಿ ಮಾತನಾಡಿ, ಪ್ಲಾಸ್ಟಿಕ್‌ನ ಬದಲಾಗಿ ಬಟ್ಟೆಯ ಚೀಲಗಳನ್ನು ಬಳಸುವುದು ಪರಿಸರ ಸಂರಕ್ಷಣೆಯಲ್ಲಿ ಉತ್ತಮ ಮಾರ್ಗ ಎಂದರು.

ಎಸ್.ಕೆ.ಪೂರ್ಣಿಮಾ ಮಾತನಾಡಿ, ಇಂದು ನಾವು ಸೇವಿಸುವ ಆಹಾರ, ನೀರು, ಗಾಳಿ ಎಲ್ಲವೂ ಮಲಿನಗೊಳ್ಳುತ್ತಿರುವದಕ್ಕೆ ನಮ್ಮ ಮಿತಿ ಮೀರಿದ ಬೇಡಿಕೆಗಳೆ ಕಾರಣವಾಗಿವೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಜಾಗ್ರತರಾಗಿ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ನಮ್ಮನ್ನು ತೊಡಗಿಸಿಕೊಳ್ಳ ಬೇಕೆಂದರು. ಕೊನೆಯಲ್ಲಿ ಶಾಲಾ ಆವರಣದಲ್ಲಿ ಗಿಡಗಳನ್ನು ನೆಟ್ಟು ನೀರೆರೆಯಲಾಯಿತು. ಕಾರ್ಯಕ್ರಮದಲ್ಲಿ ಎಂ.ಆರ್.ರಂಗಾಮಣಿ, ಚಿದಾನಂದ, ತೈಬಾ ಕೌಸರ್ ಹಾಗೂ ಸತ್ಯನಾರಾಯಣ ಮುರಳಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬದುಕಿಗೆ ದಾರಿ ತೋರುವ ಶಾಲೆಯ ಮೇಲೆ ಪ್ರೀತಿ ಇರಲಿ

## ನಿವೃತ್ತ ಶಿಕ್ಷಣಾಧಿಕಾರಿ ತಮ್ಮಣ್ಣಗೌಡ | ಜಿನ್ನೇಹಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ಪ್ರತಿಭಾ ಪುರಸ್ಕಾರ

• ಪ್ರಜೋದಯ ವರದಿ

**ಹಾಸನ:** ಅಕ್ಷರ ಕಲಿಸುವುದು ಮಾತ್ರವಲ್ಲದೆ ಬದುಕಿಗೆ ದಾರಿ ತೋರಿಸುವ ಶಾಲೆಯ ಬಗ್ಗೆ ಪ್ರತಿಯೊಬ್ಬರು ಪ್ರೀತಿ ಹೊಂದಿರಬೇಕು ಹಾಗು ಅದರ ಉಳಿವಿಗೆ ಶ್ರಮಿಸಬೇಕೆಂದು ನಿವೃತ್ತ ಶಿಕ್ಷಣಾಧಿಕಾರಿ ಜೆ.ಬಿ.ತಮ್ಮಣ್ಣಗೌಡ ಅವರು ಹೇಳಿದರು.

ತಾಲ್ಲೂಕಿನ ಜಿನ್ನೇನಹಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಾಲೆಗಳನ್ನು ಕಟ್ಟುವ, ಬೆಳೆಸುವ ಮತ್ತು ಉಳಿಸುವ ಜವಾಬ್ದಾರಿ ಗ್ರಾಮಸ್ಥರದ್ದಾಗಿದೆ. ಶಾಲೆ ಬೆಲೆ ಕಟ್ಟಲಾಗದ ಆಸ್ತಿ. ಎಂದೆಂದಿಗೂ ನಾಶವಾಗದ ಅಕ್ಷರ ಸಂಪತ್ತನ್ನು ಶಾಲೆಗಳು ನೀಡುತ್ತದೆಂಬ ಅರಿವು ಎಲ್ಲರಿಗೂ ಇರಬೇಕೆಂದರು.

ಪ್ರತಿ ವರ್ಷ ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಮ್ಮೂರ ಶಾಲೆ ಎಂಬ ಪರಿಕಲ್ಪನೆಯಡಿ ನಗದು ಬಹುಮಾನ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುತ್ತದೆ. ಈ ವರ್ಷವೂ ಅತೀ ಹೆಚ್ಚು ಅಂಕಗಳಿಸಿದ



ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗಿದೆ ಎಂದರು.

ಶಿಕ್ಷಣ ಎನ್ನುವುದು ಸರ್ಕಾರಿ ಶಾಲೆಗಳಲ್ಲಿ ಎಷ್ಟೊಂದು ಸುಲಭವಾಗಿ, ಸಹಜವಾಗಿ ಮತ್ತು ಉಚಿತವಾಗಿ ಸಿಗುತ್ತದೆಂದರೆ ಪ್ರಕೃತಿಯಲ್ಲಿ ಗಾಳಿ, ಬೆಳಕು, ನೀರು ಹೇಗೆ ಉಚಿತವಾಗಿ ಸಿಗುತ್ತದೆಯೋ ಅದೇ ರೀತಿ ಶಿಕ್ಷಣವು ಉಚಿತ ಮತ್ತು ಸುಲಭವಾಗಿ ಸಿಗುತ್ತಿದೆ. ಈ ಅವಕಾಶಗಳನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಸದುಪಯೋಗ ಮಾಡಿಕೊಳ್ಳಬೇಕೆಂದರು.

ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಉಚಿತ ಸೌಲಭ್ಯ ಇರುವುದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅದರ ಸದುಪಯೋಗ ಪಡೆಯಬೇಕು. ಒಂದು ರಾಷ್ಟ್ರದ ಪ್ರಗತಿ ಶಿಕ್ಷಣ ರಂಗದ ಪ್ರಗತಿಯನ್ನು ಅವಲಂಬಿಸಿದೆ. ಶಿಕ್ಷಣ ರಂಗದ ಪ್ರಗತಿ ಆಗಬೇಕೆಂದರೆ ವಿದ್ಯಾರ್ಥಿಗಳು ಸರಸ್ವತಿ ಇರುವೆಡೆಗೆ ಹುಡುಕಿಕೊಂಡು ಹೋಗಬೇಕು. ಅದು ಸಾಧ್ಯವಿಲ್ಲದಾಗ ಸರಸ್ವತಿಯೇ ವಿದ್ಯಾರ್ಥಿಗಳನ್ನು ಹುಡಿಕಿಕೊಂಡು ಬರಬೇಕು. ಪ್ರಾಯಶಃ ಇತ್ತೀಚಿನ ದಿನಗಳಲ್ಲಿ ಎಲ್ಲಾ ಸರ್ಕಾರಗಳ ಪ್ರಯತ್ನದಿಂದಾಗಿ ಶಿಕ್ಷಣ ರಂಗದಲ್ಲಿ ಆಗಿರುವ ಕ್ರಾಂತಿಯನ್ನು ನೋಡಿದರೆ ಪ್ರತೀ ಗ್ರಾಮದಲ್ಲಿ ಒಂದು ಸರ್ಕಾರಿ ಶಾಲೆ ಇರುವುದನ್ನು ಕಾಣಬಹುದಾಗಿದೆ. ಹಾಗಾಗಿ ಸರಸ್ವತಿಯೇ ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಬಂದ ಹಾಗೆ ಆಗಿದೆ. ಈ ಅವಕಾಶವನ್ನು ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬೇಕು. ವಿದ್ಯಾರ್ಥಿಗಳು ದೊಡ್ಡ ಗುರಿ ಹೊಂದಿ ಸಾಧನೆ ಮಾಡಬೇಕೆಂದು ಸಲಹೆ ನೀಡಿದರು.

**ದಾಖಲಾತಿ ಕುಸಿತಕ್ಕೆ ಬೇಸರ**

ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್ ಅವರು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಉಚಿತ ಸೌಲಭ್ಯಗಳಿದ್ದು ಉತ್ತಮ ಫಲಿತಾಂಶ ದೊರೆತರೂ ದಾಖಲಾತಿ ಪ್ರಮಾಣ ಕಡಿಮೆ ಇದೆ. ಹಾಗಾಗಿ ಪೋಷಕರು ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುವ ಮೂಲಕ ಶಿಕ್ಷಣ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಅನಿಲ್ ಅವರು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳು ಉತ್ತಮವಾಗಿದ್ದರೂ, ವಿಷಯವಾರು ಅರ್ಹ ಪರಿಣಿತ ಶಿಕ್ಷಕರಿದ್ದರೂ ಸಾರ್ವಜನಿಕರು ಬಳಸಿಕೊಳ್ಳುತ್ತಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಮಂಜುನಾಥ್, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಆನಂದ್, ಶಿಕ್ಷಣ ಸಂಯೋಜಕ ಜೆ.ಇ.ಲೋಕೇಶ್, ಶ್ರೀನಿವಾಸ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜಣ್ಣ ಮಾತನಾಡಿದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಜೆ.ಬಿ.ರುಕ್ಮಿಣಿ, ಮುಖ್ಯ ಶಿಕ್ಷಕ ಓಂಕಾರಮೂರ್ತಿ, ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳು ಹಾಗು ಪೋಷಕರು ಉಪಸ್ಥಿತರಿದ್ದರು.

## 3 ಲ.ರೂ. ಮೌಲ್ಯದ ಬೀಟೆ ಮರ ವಶ




• ಪ್ರಜೋದಯ ವರದಿ

**ಆಲೂರು:** ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ 3 ಲಕ್ಷ ರೂ. ಮೌಲ್ಯದ ಬೀಟೆ ಮರವನ್ನು ವಲಯ ಅರಣ್ಯ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

ಕೆ.ಹೊಸಕೋಟೆ ಶಾಖೆಯ ಮಗ್ಗೆ ಗ್ರಾಮದ ಬಳಿ ಬೀಟೆ ಮತ್ತು ಹಾಡಗ ನಾಟಗಳನ್ನು ಅಕ್ರಮವಾಗಿ ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದ ಪಿಕಪ್ ವಾಹನವನ್ನು ಸುಪರ್ದಿಗೆ ಪಡೆಯಲಾಗಿದೆ. ವಾಹನ ಚಾಲಕನನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ. ಕಾರ್ಯಾಚರಣೆಯಲ್ಲಿ ವಲಯ ಅರಣ್ಯ ಅಧಿಕಾರಿ ಸುನಿಲ್, ಉಪವಲಯ ಅರಣ್ಯಾಧಿಕಾರಿ ಮಂಜೇಗೌಡ, ಅರಣ್ಯ ಪಾಲಕರಾದ ರಾಘವೇಂದ್ರ, ವೇಣುಗೋಪಾಲ್ ಭಾಗವಹಿಸಿದ್ದರು.

## ಭಾರತ-ಇಂಡೋನೇಷ್ಯಾ ಪಾಲುದಾರಿಕೆ: ಜೈಶಂಕರ್-ಸುಗಿಯೊನೊ ಮಾತುಕತೆ

• ಪ್ರಜೋದಯ ವರದಿ



**ನವದೆಹಲಿ:** ಭಾರತ ಮತ್ತು ಇಂಡೋನೇಷ್ಯಾ ನಡುವೆ ಪಾಲುದಾರಿಕೆ ವಿಸ್ತರಿಸುವ ಸಲುವಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಇಂಡೋನೇಷ್ಯಾದ ವಿದೇಶಾಂಗ ಸಚಿವ ಸುಗಿಯೊನೊ ಅವರನ್ನು ಭಾನುವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ಭಾರತ ಮತ್ತು ಇಂಡೋ ನೇಷ್ಯಾ ಜಂಟಿ ಆಯೋಗದ ಎಂಟನೇ ಸಭೆಗಾಗಿ ಸುಗಿಯೊನೊ ಮತ್ತು ಅವರ ಆಯೋಗ ನವ ದೆಹಲಿಗೆ ಬಂದಿದೆ. ಉಭಯ ದೇಶಗಳ ನಡುವಿನ ಸಮಗ್ರ ಪಾಲುದಾರಿಕೆ ಕಾರ್ಯತಂತ್ರಕ್ಕೆ ಈ ಭೇಟಿಯು ಹೊಸ ಚೈತನ್ಯ ತುಂಬಲಿದೆ ಎಂದು ಜೈಶಂಕರ್ ಅವರು ತಿಳಿಸಿದರು.

ಕಳೆದ ವರ್ಷ ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂಟೋ ಅವರ ಭಾರತ ಭೇಟಿಯು ಉಭಯ ದೇಶಗಳ ಪಾಲುದಾರಿಕೆಯಲ್ಲಿ ಹೊಸ ಹಾದಿ ರೂಪಿಸುವಲ್ಲಿ ಸಹಾಯಕವಾಗಿದೆ ಎಂದು ಸುಗಿಯೊನೊ ಅವರು ಹೇಳಿದರು. ರಕ್ಷಣೆ, ಕಡಲ ವ್ಯಾಪಾರ ಮತ್ತು ಹೂಡಿಕೆ, ಆರೋಗ್ಯ, ಔಷಧ ಮತ್ತು ಆಹಾರ ಭದ್ರತೆ ಸೇರಿ ಅನೇಕ ಕ್ಷೇತ್ರದಲ್ಲಿನ ದ್ವಿಪಕ್ಷೀಯ ಸಹಕಾರದ ಕುರಿತು ವ್ಯಾಪಕ ಚರ್ಚೆ ನಡೆಸಲಾಗಿದೆ.

## ವಿದೇಶಿ ಪ್ರವಾಸಕ್ಕೆ ವೈಭವ್ ಸೂರ್ಯವಂಶಿ ಪಾಲಕರಿಗೆ ಅವಕಾಶ

**ನವದೆಹಲಿ:** ವಿದೇಶಗಳಿಗೆ ಪ್ರವಾಸ ಮಾಡುವ ಭಾರತ ತಂಡದಲ್ಲಿ ಆಡುವ ವೈಭವ್ ಸೂರ್ಯವಂಶಿಯೊಂದಿಗೆ ಅವರ ಪಾಲಕರ ಪ್ರಯಾಣಕ್ಕೆ ಅನುಮತಿ ನೀಡಲಾಗಿದೆ. 15 ವರ್ಷದ ವೈಭವ್ ಅವರು ಮುಂಬರುವ ಸರಣಿಗಳಲ್ಲಿ ಐರ್ಲೆಂಡ್, ಇಂಗ್ಲೆಂಡ್ ಪ್ರವಾಸ ಹಾಗೂ ಏಷ್ಯನ್ ಕ್ರೀಡಾಕೂಟದಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈಚೆಗೆ ಮುಕ್ತಾಯವಾದ ಐಪಿಎಲ್ ಟೂರ್ನಿಯಲ್ಲಿ ಅವರು ಆರೆಂಜ್ ಕ್ಯಾಪ್ ಗಳಿಸಿದ್ದರು.

ಸದ್ಯ ಶ್ರೀಲಂಕಾದಲ್ಲಿ ನಡೆಯುತ್ತಿರುವ ತ್ರಿಕೋನ ಕ್ರಿಕೆಟ್ ಸರಣಿಯಲ್ಲಿ ಆಡುತ್ತಿರುವ ಭಾರತ ಎ ಬಳಗದಲ್ಲಿ ವೈಭವ್ ಇದ್ದಾರೆ. ವೈಭವ್ ತಂದೆಯು ಭಾರತ ಎ ತಂಡದೊಂದಿಗೆ ಶ್ರೀಲಂಕಾಕ್ಕೆ ತೆರಳುವರು. ಒಂದೊಮ್ಮೆ ವೈಭವ್ ಪಾಲಕರು ಇಂಗ್ಲೆಂಡ್ ಮತ್ತು ಐರ್ಲೆಂಡ್‌ಗೆ ಹೋಗಲು ಇಚ್ಛಿಸಿದರೆ ಪ್ರಯಾಣದ ವ್ಯವಸ್ಥೆ ಮಾಡಲಾಗುವುದು. ವೈಭವ್‌ಗೆ ಪಾಲಕರೇ ಅತ್ಯುತ್ತಮ ಬೆಂಬಲಿಗರು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ.

## ತ್ರಿಭಾಷಾ ನೀತಿ ಜಾರಿಗೆ ತಡೆ ನೀಡಿ: ಮೋದಿಗೆ ದಿಗ್ವಿಜಯ್ ಸಿಂಗ್ ಪತ್ರ

• ಪ್ರಜೋದಯ ವರದಿ



**ನವದೆಹಲಿ:** ಸಿಬಿಎಸ್‌ಇ 9ನೇ ತರಗತಿ ವಿದ್ಯಾರ್ಥಿಗಳಿಗೆ ಜುಲೈ 1ರಿಂದ ತ್ರಿಭಾಷಾ ನೀತಿಯ ಕಡ್ಡಾಯ ಜಾರಿಯನ್ನು ತಡೆಹಿಡಿಯಬೇಕೆಂದು ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ಸಂಸದ ದಿಗ್ವಿಜಯ್ ಸಿಂಗ್ ಪತ್ರ ಬರೆದಿದ್ದಾರೆ.

ಸೂಕ್ತ ಪಠ್ಯಪುಸ್ತಕಗಳು, ಶಿಕ್ಷಕರ ಲಭ್ಯತೆ ಹಾಗೂ ಸಿದ್ಧತೆಗಳಿಲ್ಲದೆ ಏಕಾಏಕಿ ತ್ರಿಭಾಷಾ ನೀತಿ ಜಾರಿ ಕಡ್ಡಾಯಗೊಳಿಸಿದರೆ ಅದು ಶಿಕ್ಷಣ ವ್ಯವಸ್ಥೆಯಲ್ಲಿನ ಗಂಭೀರ ಅಡಚಣೆಗೆ ಕಾರಣ ವಾಗಲಿದೆ ಎಂದೂ ಸಿಂಗ್ ಕಳವಳ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳು, ಯುವಜನತೆ ಹಾಗೂ ಕ್ರೀಡೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಗೆ ಅಧ್ಯಕ್ಷರಾಗಿರುವ ಸಿಂಗ್, ಸಿಬಿಎಸ್‌ಇ 9ನೇ ತರಗತಿಯ ವಿದ್ಯಾರ್ಥಿಗಳ ಪೋಷಕರು ಕಳವಳ ವ್ಯಕ್ತಪಡಿಸಿ ತಮಗೆ ಸಲ್ಲಿಸಿರುವ ಮನವಿ ಪತ್ರಗಳ ಪ್ರತಿಯನ್ನು ಮೋದಿ ಅವರಿಗೂ ಕಳುಹಿಸಿದ್ದಾರೆ.

ತ್ರಿಭಾಷಾ ನೀತಿ ವಿಚಾರವು ವಿಚಾರಣೆಯ ಹಂತದಲ್ಲಿದ್ದು, ಜುಲೈ 15ರಂದು ಇದಕ್ಕೆ ಸಂಬಂಧಿಸಿದ ತೀರ್ಪು ಹೊರಬೀಳಲಿದೆ. ಅದಕ್ಕೂ ಮುನ್ನವೇ ಜುಲೈ 1ರಂದು ನೀತಿ ಜಾರಿಗೊಳಿ ಸಲು ನಿರ್ಧರಿಸಿರುವುದು ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನೂ ಪರಿಗಣಿಸಿ ನೀತಿ ಜಾರಿಯನ್ನು ತಡೆ ಹಿಡಿಯಬೇಕೆಂದು ನಾನು ಶಿಫಾರಸು ಮಾಡುತ್ತಿದ್ದೇನೆಂದು ಅವರು ಪ್ರಧಾನಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

## ಗ್ರಾಮೀಣ ಜನರ ಆರೋಗ್ಯಕ್ಕಾಗಿ ಆಯುಷ್ಮಾನ್ ಆರೋಗ್ಯ ಮಂದಿರ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗ್ರಾಮೀಣ ಜನರಿಗೆ ಸ್ಥಳೀಯವಾಗಿ ಗುಣಮಟ್ಟದ ವೈದ್ಯಕೀಯ ಸೇವೆ ಸಿಗಬೇಕೆಂಬ ಉದ್ದೇಶದಿಂದ ಆರೋಗ್ಯ ಮಂದಿರ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಕಸಬಾ ಹೋಬಳಿ ಬೆಲಸಿಂದ ಗ್ರಾಮದಲ್ಲಿ 65 ಲ.ರೂ. ವೆಚ್ಚದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುವ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗೆ ಭಾನುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆ ಲಭ್ಯವಾದರೆ ಜನರು ನಗರ ಪ್ರದೇಶಗಳಿಗೆ ಅಲೆಯುವುದು ತಪ್ಪುತ್ತದೆಂದರು.

ಆಯುಷ್ ಆರೋಗ್ಯ ಮಂದಿರ ಸ್ಥಾಪನೆಗೆ ಒತ್ತು ನೀಡಲಾಗಿದೆ. ಗುಲಸಿಂದ, ಕೆರೆ ಚಿಕ್ಕೇನಹಳ್ಳಿ, ಮಾಳೆಕೊಪ್ಪಲು ಸೇರಿ ಭಾಗದ



ಗ್ರಾಮಸ್ಥರಿಗೆ ಸಣ್ಣಪುಟ್ಟ ಅನಾರೋಗ್ಯ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರಕ್ಕೆ 37 ಆಯುಷ್ ಕೇಂದ್ರಗಳು ಮಂಜೂರಾಗಿದ್ದು ಆರೋಗ್ಯ ಕ್ಷೇತ್ರದ ಸೌಲಭ್ಯಗಳ ಉನ್ನತೀಕರಣಕ್ಕೆ ಆದ್ಯತೆ ನೀಡಲಾಗುವುದು. ಗ್ರಾಮಸ್ಥರಿಗೆ ಉತ್ತಮ ಚಿಕಿತ್ಸೆ ದೊರೆಯಬೇಕು ಎನ್ನುವುದು ನಮ್ಮ ಕಾಳಜಿಯಾಗಿದೆ. ಗ್ರಾಮದಲ್ಲಿ ಶಿಥಿಲಾವಸ್ಥೆ ತಲುಪಿರುವ ದೇವಸ್ಥಾನಗಳ ಪುನರ್ ನಿರ್ಮಾಣಕ್ಕೆ 3 ಲಕ್ಷ ರೂ. ಅನುದಾನ ಒದಗಿಸಿ ಪೂರ್ಣಗೊಳಿಸಲಾಗುವುದೆಂದು ಭರವಸೆ ನೀಡಿದರು.

ಬೆಲಸಿಂದ ಗ್ರಾಮ ವಿಸ್ತಾರವಾಗಿ ಬೆಳೆಯುತ್ತಿದ್ದು ರಸ್ತೆ, ಚರಂಡಿ, ಅಗತ್ಯ ಕಾಮಗಾರಿಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ವಿವಿಧ ಬೇಡಿಕೆಗಳ ಈಡೇರಿಕೆಗೆ ನಾಗರಿಕರು ಮನವಿ ಸಲ್ಲಿಸಿದ್ದಾರೆ. ಹಂತ ಹಂತವಾಗಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದರು.

ಗುಲಸಿಂದ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜಗದೀಶ್, ಮಾಜಿ ಸದಸ್ಯರಾದ ಹರೀಶ್, ಗವಿರಂಗ, ಮಂಜೇಗೌಡ, ರಾಜು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಚಂದ್ರೇಗೌಡ, ಕಾರ್ಯದರ್ಶಿ ಸೋಮಶೇಖರ್, ತೋಪೇಗೌಡ, ಮಧು, ಹರ್ಷ ಮತ್ತಿತರರಿದ್ದರು.

## ಜಮೀರ್ ಇಲ್ಲದ ಸರ್ಕಾರ ಆಗಲ್ಲ: ಕೋಡಿ ಶ್ರೀ

• ಪ್ರಜೋದಯ ವರದಿ

**ಹಾಸನ :** ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ರಚನೆಯಾಗಿದ್ದು, 2ನೇ ಹಂತದಲ್ಲಿ ಸಚಿವ ಸಂಪುಟ ಸ್ಲೇಟು ಶಾಸಕರು ಕಸರತ್ತು ನಡೆಸಿದ್ದಾರೆ. ಇದರ ಮಧ್ಯೆ ಸಿದ್ದರಾಮಯ್ಯನವರ ಪರಮಾಪ್ತ ಜಮೀರ್ ಅಹಮ್ಮದ್ ಖಾನ್‌ಅವರನ್ನು ಮಂತ್ರಿ ಮಾಡಬೇಕೆಂಬ ಕೂಗು ಬಲವಾಗಿ ಕೇಳಿ ಬರುತ್ತಿವೆ. ಇದರ ಮಧ್ಯೆ ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರು ಜಮೀರ್ ಪರ ಬ್ಯಾಟಿಂಗ್ ಮಾಡಿದ್ದು, ಯಾವ ಕಾರಣಕ್ಕೂ ಜಮೀರ್ ಇಲ್ಲದ ಸರ್ಕಾರ ಆಗಲ್ಲ. ಜಮೀರ್ ಇದ್ದರೆ ಸರ್ಕಾರ. ಆ ದೃಷ್ಟಿಯಿಂದ ಜಮೀರ್ ಅವರು ಮಂತ್ರಿಮಂಡಲ ಸೇರುತ್ತಾರೆಂದು ಭವಿಷ್ಯ ನುಡಿದಿದ್ದಾರೆ.

**ಕೆ.ಎಂ.ಶಿವಲಿಂಗೇಗೌಡರಿಗೂ ಮಂತ್ರಿ ಸ್ಥಾನ ಸಿಗುತ್ತೆ**

ಅರಸೀಕೆರೆಯ ಸಮಾರಂಭದಲ್ಲಿ ಮಾತನಾಡಿ ಅವರು, ಜಮೀರ್ ಅಹಮ್ಮದ್ ಅವರ ಆಡಿಯೋ ವಿಚಾರ ಅಪಪ್ರಚಾರದ ಉದ್ದೇಶದಿಂದ ಆಗಿದೆ. ಇನ್ನೊಂದು ದೊಡ್ಡ ಅಪಪ್ರಚಾರ ಇತ್ತು. ಇದು ಮೊದಲು ಬಂದು ಆ ಅಪಪ್ರಚಾರ ಮುಚ್ಚಿಹೋಗುತ್ತಿದೆ. ಜಮೀರ್ ಹೆದರುವ ಅವಶ್ಯಕತೆ ಇಲ್ಲ. ಅವರು ಮತ್ತೊಮ್ಮೆ ಮಂತ್ರಿಮಂಡಲ ಸೇರುತ್ತಾರೆ ಎಂದಿದ್ದಾರೆ.

ಜಮೀರ್ ಜೊತೆಗೆ ನಮ್ಮ ಶಿವಲಿಂಗೇಗೌಡರಿಗೂ ಮಂತ್ರಿ ಸ್ಥಾನ ಸಿಗುತ್ತದೆ. ಯೋಚನೆ ಮಾಡುವುದು ಬೇಡ. ಯಾವ ಕಾರಣಕ್ಕೂ ಜಮೀರ್ ಇಲ್ಲದ ಸರ್ಕಾರ ಆಗಲ್ಲ. ಜಮೀರ್ ಇದ್ದರೆ ಮಾತ್ರ ಅದು ಸರ್ಕಾರ ಎನಿಸಿಕೊಳ್ಳುತ್ತದೆ. ಆ ದೃಷ್ಟಿಯಿಂದ ಅವರು ಮತ್ತೊಮ್ಮೆ ಮಂತ್ರಿ ಆಗುತ್ತಾರೆ ಎಂದರು.

## ಸಿಲಿಂಡರ್ ದರ ಏರಿಕೆ-ಬಿಜೆಪಿಗರು ಏಕೆ ಪ್ರತಿಭಟಿಸುತ್ತಿಲ್ಲ: ಕಾಂಗ್ರೆಸ್ ಪ್ರಶ್ನೆ

**ನವದೆಹಲಿ:** ಗೃಹ ಬಳಕೆ ಸಿಲಿಂಡರ್ ದರ ಏರಿಕೆ ಖಂಡಿಸಿ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಕಾಂಗ್ರೆಸ್ ಭಾನುವಾರ ತೀವ್ರ ವಾಗ್ದಾಳಿ ನಡೆಸಿದೆ. ಯುಪಿಎ ಅವಧಿಯಲ್ಲಿ ಹಣದುಬ್ಬರದ ಬಗ್ಗೆ ಊಳಿಡುತ್ತಿದ್ದ ಬಿಜೆಪಿಗರು ಈಗ ಏಕೆ ಸಿಲಿಂಡರ್‌ಗಳನ್ನು ಹಿಡಿದು ಬೀದಿಗಿಳಿದು ಪ್ರತಿಭಟಿಸುತ್ತಿಲ್ಲ ಎಂದು ಟೀಕಿಸಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅದಕ್ಕೆ ಸಂಬಂಧಿಸಿದಂತೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯು ಸಾಮಾನ್ಯ ಜನರನ್ನು ಆತಂಕಕ್ಕೆ ದೂಡುತ್ತಿದೆ. ಮೋದಿ ಸರ್ಕಾರವು ಕಳೆದ ನಾಲ್ಕು ತಿಂಗಳಲ್ಲಿ ಸಿಲಿಂಡರ್ ಬೆಲೆಯನ್ನು 89ರಷ್ಟು ಹೆಚ್ಚಿಸಿದೆ ಎಂದು ದೂರಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷ ತೀವ್ರಗೊಂಡಿರುವ ಕಾರಣ 41 ದೇಶಗಳ ಮೂಲಕ ಇಂಧನ ಮೂಲವನ್ನು ಕಂಡುಕೊಳ್ಳಲಾಗಿದೆಂದು ಸಂಸತ್ತಿನಲ್ಲಿ ಮೋದಿ ಹೇಳಿದ್ದಾರೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಎಲ್‌ಪಿಜಿ ಕೊರತೆ ಏಕೆ ಮುಂದುವರಿದಿದೆ ಎಂದು ಪ್ರಶ್ನಿಸಿದ್ದಾರೆ.

2025–26ರ ಅವಧಿಯಲ್ಲಿ ಉಜ್ವಲ ಯೋಜನೆ ಅಡಿಯಲ್ಲಿ 5.56 ಕೋಟಿ ಕುಟುಂಬಗಳಿಗೆ ಒಂದು ಬಾರಿಯೂ ಸಿಲಿಂಡರ್ ರೀ ಫಿಲ್ಲಿಂಗ್ (ಮರುಪೂರಣ) ಸಿಕ್ಕಿಲ್ಲ. ಈ ಪೈಕಿ 3.30 ಕೋಟಿ ಕುಟುಂಬಗಳು ರೀ ಫಿಲ್ಲಿಂಗ್ ಆಯ್ಕೆಯನ್ನೂ ಮಾಡಿಲ್ಲ. ಪಶ್ಚಿಮ ಏಷ್ಯಾ ಬಿಕ್ಕಟ್ಟಿಗಿಂತ ಹಿಂದೆಯೇ ಈ ಪರಿಸ್ಥಿತಿ ಇತ್ತು. ಇದು ಮೋದಿ ಸರ್ಕಾರದ ಲಾಭಕೋರತನದ ಪರಿಣಾಮ ಅಲ್ಲವೇ ಎಂದು ಖರ್ಗೆ ಕೇಳಿದ್ದಾರೆ.

ಕಳೆದ 12 ವರ್ಷದಲ್ಲಿ ಮೋದಿ ಸರ್ಕಾರವು ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರವನ್ನು 530 ರಷ್ಟು ಹೆಚ್ಚಿಸಿದರೂ ಬಿಜೆಪಿಯವರು ಏಕೆ ಮಾತನಾಡುತ್ತಿಲ್ಲ, ಪ್ರತಿಭಟಿಸುತ್ತಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

## ಗಡಿ ವಿವಾದ: ಮಾತುಕತೆಯಿಂದ ಪರಿಹಾರ ಸಾಧ್ಯವೆಂದ ನೇಪಾಳ

• ಪ್ರಜೋದಯ ವರದಿ

**ನವದೆಹಲಿ:** ಭಾರತ ಮತ್ತು ನೇಪಾಳ ನಡುವಿನ ಗಡಿ ವಿವಾದವನ್ನು ರಾಜತಾಂತ್ರಿಕ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳಲು ನೇಪಾಳ ಬಯಸಿದೆ. ಉಭಯ ದೇಶಗಳು ಮುಕ್ತ ಮನಸ್ಸಿನಿಂದ ಮುಖಾಮುಖಿ ಕುಳಿತು ಚರ್ಚಿಸಿದರೆ ಜಗತ್ತಿನ ಯಾವುದೇ ದೊಡ್ಡ ಸಮಸ್ಯೆಯನ್ನೂ ಬಗೆಹರಿಸಬಹುದೆಂದು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಅವರು ಹೇಳಿದ್ದಾರೆ.

ನೇಪಾಳದಲ್ಲಿ ಅಧಿಕಾರಕ್ಕೆ ಬಂದಿರುವ ಹೊಸ ಸರ್ಕಾರವು ಭಾರತವನ್ನು 21ನೇ ಶತಮಾನದ ಜಿಯೋಪಾಲಿಟಿಕ್ಸ್‌ನ ಸಂಕೀರ್ಣ ಅಥವಾ ಅತಿ ಸೂಕ್ಷ್ಮ ದೃಷ್ಟಿಕೋನದಿಂದ ನೋಡಲು ಬಯಸುವುದಿಲ್ಲ. ಬದಲಿಗೆ, ಉಭಯ ರಾಷ್ಟ್ರಗಳ ಸರ್ವತೋಮುಖ ಪ್ರಗತಿಗಾಗಿ ಪರಸ್ಪರ ಪ್ರಯೋಜನಕಾರಿ ಸಂಬಂಧವನ್ನು ವೃದ್ಧಿಸಿಕೊಳ್ಳಲು ಉತ್ಸುಕವಾಗಿದೆ ಎಂದು ತಿಳಿಸಿದ್ದಾರೆ.

ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದ ಮರುದಿನವೇ ಮಾಧ್ಯಮಗಳೊಂದಿಗೆ ಮಾತನಾಡಿದ ಖನಾಲ್ ಈ ಮಹತ್ವದ ಹೇಳಿಕೆ ನೀಡಿದ್ದಾರೆ. ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ ಖನಾಲ್ ಅವರು ಶುಕ್ರವಾರದಿಂದ ಮೂರು ದಿನಗಳ ನವದೆಹಲಿ ಪ್ರವಾಸದಲ್ಲಿದ್ದಾರೆ. ಇತ್ತೀಚೆಗಷ್ಟೇ ನೇಪಾಳದ ಪ್ರಧಾನಿ ಬಾಲೇಂದ್ರ ಶಾ ಅವರು ಗಡಿ ವಿವಾದದ ಕುರಿತು ನೀಡಿದ್ದ ಹೇಳಿಕೆ ಭಾರೀ ವಿವಾದ ಸೃಷ್ಟಿಸಿದ್ದ ಬೆನ್ನಲ್ಲೇ ಈ ಭೇಟಿ ನಡೆದಿರುವುದು



ಜಾಗತಿಕ ವಲಯದಲ್ಲಿ ಕುತೂಹಲ ಮೂಡಿಸಿದೆ.

ನಾವು ಮುಕ್ತ ಮನಸ್ಸಿನಿಂದ ಒಟ್ಟಿಗೆ ಕುಳಿತಾಗ ಯಾವುದೇ ಸಮಸ್ಯೆಯೂ ದೊಡ್ಡದಲ್ಲ ಮತ್ತು ಗಡಿಯೂ ಸಂಕೀರ್ಣವಲ್ಲ. ನಾವು ಭಾರತವನ್ನು ಮುಕ್ತ ಮನಸ್ಸು, ಸ್ಪಷ್ಟ ದೃಷ್ಟಿಕೋನ ಮತ್ತು ಒಂದೇ ಒಂದು ಪಾರದರ್ಶಕ ಕಾರ್ಯಸೂಚಿಯೊಂದಿಗೆ ನೋಡುತ್ತಿದ್ದೇವೆ. ಅದುವೇ ನೇಪಾಳದ ಆರ್ಥಿಕ ಪರಿವರ್ತನೆ ಎಂದು ಖನಾಲ್ ಭರವಸೆ ವ್ಯಕ್ತಪಡಿಸಿದರು.

ಅತಿ-ರಾಷ್ಟ್ರೀಯತೆಯ ರಾಜಕೀಯ ಪ್ರದರ್ಶನ ಮಾಡುವ ಬದಲು, ದತ್ತಾಂಶ ಆಧಾರಿತ ಮತ್ತು ಶಾಂತಿಯುತ ಮಾರ್ಗದ ಮೂಲಕ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ತಮ್ಮ ಸರ್ಕಾರ ಮುಂದಾಗಿದೆ ಎಂದರು.

ಇದೇ ವೇಳೆ ಭಾರತದ ಅಭೂತಪೂರ್ವ ಆರ್ಥಿಕ ಮತ್ತು ತಾಂತ್ರಿಕ ಬೆಳವಣಿಗೆಯನ್ನು ಖನಾಲ್ ಮುಕ್ತಕಂಠದಿಂದ ಶ್ಲಾಘಿಸಿದರು. ನಾವು ಗಡಿಯ ಆಚೆಗೆ ನೋಡಿದಾಗ ನಮಗೆ ಕಾಣಿಸುವುದು ಉದಯೋನ್ಮುಖ ಭಾರತ. ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಮತ್ತು ಆರ್ಥಿಕತೆಯ ಶಕ್ತಿ ಕೇಂದ್ರವಾಗಿ ಭಾರತ ತನ್ನನ್ನು ತಾನು ಅತ್ಯಂತ ಸುಂದರವಾಗಿ ಮರು ವ್ಯಾಖ್ಯಾನಿಸಿಕೊಂಡಿದೆ. ಇಂತಹ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಮಹತ್ವಾಕಾಂಕ್ಷೆಯ ಭಾರತದೊಂದಿಗೆ ಕೈಜೋಡಿಸಲು ನಾವು ಬಯಸುತ್ತೇವೆ. ಅದಕ್ಕೆ ಪ್ರತಿಯಾಗಿ ನಾವು ಉನ್ನತ ಕನಸುಗಳನ್ನು ಹೊಂದಿರುವ ನೇಪಾಳದ ಯುವ ಶಕ್ತಿಯನ್ನು ಒಟ್ಟಿಗೆ ತರಲಿದ್ದೇವೆಂದು ಅವರು ಆಶಯ ವ್ಯಕ್ತಪಡಿಸಿದರು.

### ಭಾರತದ ಮೇಲೆ ಒತ್ತಡ ಯಾವತ್ತಿಗೂ ತಿರುಗುಬಾಣ

ಭಾರತದ ಕಾರ್ಯತಂತ್ರದ ಸ್ವಾಯತ್ತತೆಯನ್ನು ಬಲವಾಗಿ ಬೆಂಬಲಿಸಿರುವ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ನಿರ್ಬಂಧಗಳ ಮೂಲಕ ಭಾರತದ ಮೇಲೆ ಒತ್ತಡ ಹೇರುವ ಯಾವುದೇ ಪ್ರಯತ್ನವು ತಿರುಗುಬಾಣವಾಗಲಿದೆ ಎಂದಿದ್ದಾರೆ.

ಸೇಂಟ್ ಪೀಟರ್ಸ್‌ಬರ್ಗ್ ಅಂತಾರಾಷ್ಟ್ರೀಯ ಆರ್ಥಿಕ ವೇದಿಕೆಯಲ್ಲಿ ಮಾತನಾಡಿದ ಪುಟಿನ್ ಅವರು, ಭಾರತವು ನಿರಂತರವಾಗಿ ತನ್ನ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದೆ. ರಷ್ಯಾದೊಂದಿಗಿನ ಸಂಬಂಧಗಳ ಮೇಲೆ ಬಾಹ್ಯ ಒತ್ತಡದ ಹೊರತಾ ಗಿಯೂ ಅದನ್ನು ಮುಂದುವರಿಸಿದೆ ಎಂದು ಹೇಳಿದ್ದಾರೆ. ಭಾರತ ಯಾವಾಗಲೂ ಸಾರ್ವಭೌಮ ರಾಷ್ಟ್ರವಾಗಿ ಕಾರ್ಯನಿರ್ವಹಿಸುತ್ತದೆ. ಭಾರತದ ಮೇಲಿನ ನಿರ್ಬಂಧಗಳ ಯಾವುದೇ ಬೆದರಿಕೆ ತಕ್ಷಣವೇ ತಿರುಗುಬಾಣವಾಗುತ್ತವೆ ಎಂದು ಪರೋಕ್ಷವಾಗಿ ಅಮೇರಿಕಾಗೆ ಪುಟಿನ್ ಎಚ್ಚರಿಕೆ ನೀಡಿದ್ದಾರೆ.

## ರಾಜಕೀಯವಾಗಿ ಬಹು ಎತ್ತರದ ವ್ಯಕ್ತಿ ಹೆಚ್.ಸಿ.ಶ್ರೀಕಂಠಯ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಇಂದಿನ ರಾಜಕಾರಣದಲ್ಲಿ ದ್ವೇಷ, ಅಸೂಯೆ ಹೆಚ್ಚಿರುವ ದಿನಗಳಲ್ಲಿ ಅವುಗಳನ್ನು ತಮ್ಮ ರಾಜಕೀಯ ಜೀವನುದ್ದಕ್ಕೂ ಮೈಗಂಟಿಸಿಕೊಳ್ಳದೇ 5 ದಶಕಗಳಿಗೂ ಹೆಚ್ಚು ಕಾಲ ಉತ್ತಮ ರಾಜಕಾರಣಿಯಾಗಿದ್ದವರು ಮಾಜಿ ಸಚಿವ ಹೆಚ್.ಸಿ.ಶ್ರೀಕಂಠಯ್ಯನವರು ಎಂದು ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಅವರು ಹೇಳಿದರು.

ಮಾಜಿ ಸಚಿವ ಹೆಚ್.ಸಿ. ಶ್ರೀಕಂಠಯ್ಯನವರ ಜನ್ಮಶತಮಾನೋತ್ಸವದ ಅಂಗವಾಗಿ ಪಟ್ಟಣದ ಮಾಧ್ಯಮಿಕ ಶಾಲಾ ಆವರಣದಲ್ಲಿ ಮೂರು ದಿನಗಳ ಹೊನಲು ಬೆಳಕಿನ ರಾಷ್ಟ್ರಮಟ್ಟದ ಹೊನಲು ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಕಂಠಯ್ಯನವರ ರಾಜಕೀಯ ಶಕ್ತಿ ಇತ್ತೀಚಿನ ಯುವಕರಿಗೆ, ಯುವ ರಾಜಕಾರಣಿಗಳಿಗೆ ತಿಳಿದಿಲ್ಲ, ರಾಜಕೀಯವಾಗಿ ಶಿಸ್ತು, ಸೇವೆ, ಬದ್ಧತೆ ಹೊಂದಿದ್ದ ಅತ್ಯಂತ ಎತ್ತರದ ವ್ಯಕ್ತಿ ಎಂದರು.

ತಾಲ್ಲೂಕಿನ ಪ್ರತಿ ಕುಟುಂಬಕ್ಕೆ, ಬಡವರಿಗೆ ಆಸರೆಯಾಗಿದ್ದವರು, ಮಕ್ಕಳ ವಿದ್ಯಾಭ್ಯಾಸ, ಕೆಲಸ, ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದ ವ್ಯಕ್ತಿ. ಇಂದಿಗೂ ಶ್ರೀಕಂಠಯ್ಯನವರ ಹೆಸರಿನಲ್ಲಿ ಅದೆಷ್ಟು ಕುಟುಂಬಗಳು ಜೀವನ



ಕಂಡುಕೊಂಡಿವೆ. ಜಿಲ್ಲೆಯಲ್ಲಿಯ ಅಭಿವೃದ್ಧಿಗೆ ಅವರ ಸೇವೆ ಅನನ್ಯವಾದದ್ದು, ಅವರ ಸೇವಾಮನೋಭಾವದಿಂದಲೇ ಅಣ್ಣಯ್ಯ ಎಂಬ ಪರಿಚತರಾಗಿದ್ದರು. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಅವರ ಖ್ಯಾತಿ ಪಡೆದಿದ್ದರು, ಇಂದಿಗೂ ಅವರ ಹೆಸರು ರಾಜ್ಯ ರಾಜಕೀಯದಲ್ಲಿ ಅಚ್ಚಳಿಯದೇ ಉಳಿದಿದೆ ಎಂದರು.

ರಾಜಕೀಯವಾಗಿ ಅವರನ್ನು ಹತ್ತಿರದಿಂದ ಬಲ್ಲವನು ನಾನು, ಅವರ ಎದುರು ಸೋತವನು, ಗೆದ್ದವನು, ನನಗೆ ರಾಜಕೀಯವಾಗಿ ಶಕ್ತಿ ಮತ್ತು ವೈಚಾರಿಕತೆ ಇದೆ ಎಂದರೇ ಅವರ ಒಡನಾಟ ಕಾರಣ. ಅವರ 100ನೇ ವರ್ಷದ ಜನ್ಮಶತಮಾನೋತ್ಸವವನ್ನು ಅವರ ಮೊಮ್ಮಗ ಕರ್ನಾಟಕ ವಿದ್ಯುತ್ ಕಾರ್ಖಾನೆ ಅಧ್ಯಕ್ಷ ಹೆಚ್.ಸಿ.ಲಲಿತ್ ರಾಘವ್ ಮತ್ತು ಹೆಚ್.ಎಸ್.ವಿಜಯಕುಮಾರ್ ಕುಟುಂಬ ಅತ್ಯಂತ ವಿಜೃಂಭಣೆಯಿಂದ ಮಾಡುತ್ತಿದೆ. ಅದಕ್ಕೆ ತಾಲ್ಲೂಕಿನ ಪ್ರತಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಜನಸಾಮಾನ್ಯರು ಸಹಕಾರ ನೀಡಬೇಕು. ಈಗಾಗಲೇ ಯುವಕರಿಗೆ ಕೌಶಲ್ಯ ತರಬೇತಿ, ಸ್ಪೀಕಿಂಗ್ ಕೋರ್ಸ್‌ನಂತಹ ತರಬೇತಿ ನೀಡುತ್ತಿದ್ದು, ಯುವಕರನ್ನು ಕ್ರೀಡೆಯತ್ತ ಆಸಕ್ತಿ ಮೂಡಿಸುವ ಸಲುವಾಗಿ ರಾಷ್ಟ್ರಮಟ್ಟದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಿದ್ದು ಅವರ ಪ್ರಯತ್ನಕ್ಕೆ ಶುಭವಾಗಲಿ ಎಂದರು.

ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಎಲ್.ಪಿ.ಪ್ರಕಾಶ್‌ಗೌಡ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಶ್ರೀಕಂಠಯ್ಯನವರ ಮಾಡಿರುವ ಅಭಿವೃದ್ಧಿ ಕಾರ್ಯಗಳು ಶಾಶ್ವತ ನೆಲೆಗಟ್ಟಿನವು, ಸಹಕಾರ ಸಕ್ಕರೆ ಕಾರ್ಖಾನೆ, ಬಸ್‌ನಿಲ್ದಾಣ, ಕೋರ್ಟ್ ಸಂಕೀರ್ಣ, ಸರ್ಕಾರಿ ಶಾಲಾ ಕಾಲೇಜುಗಳ ಕೊಡುಗೆಗಳನ್ನು ಜನ ಎಂದೆಂದಿಗೂ ಸ್ಮರಿಸುತ್ತಾರೆ ಎಂದರು.

ಕೇರಳ ಪೊಲೀಸ್ ಮತ್ತು ಹಿರೀಸಾವೆ ತಂಡಗಳ ನಡುವೆ ನಡೆದ ಮೊದಲ ಪಂದ್ಯಕ್ಕೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ಎಸ್.ವಿಜಯ್ ಕುಮಾರ್, ಕವಿಕಾ ಅಧ್ಯಕ್ಷ ಹೆಚ್.ಸಿ. ಲಲಿತ್ ರಾಘವ್ ಚಾಲನೆ ನೀಡಿದರು.

ಸಮಾರಂಭದಲ್ಲಿ ಮುಖಂಡರಾದ ಜೆ.ಎಂ.ರಾಮಚಂದ್ರ, ಎಂ.ಶಂಕರ್, ಎನ್.ಡಿ.ಕಿಶೋರ್, ಸಿ.ಟಿ.ಅಶೋಕ್ ಕುಮಾರ್, ದಿಡಗ ಬಾಲಣ್ಣ, ಅಣತಿ ಆನಂದ್‌ಕುಮಾರ್, ಎಂ.ಕೆ.ಮಂಜೇಗೌಡ, ಎ.ಬಿ.ನಂಜುಂಡೇಗೌಡ, ಉದಯ್‌ಕುಮಾರ್, ವಾಸು, ಸುಹೀಲ್ ಪಾಷ, ಸೇರಿ ಪುರಸಭಾ ಮಾಜಿ ಸದಸ್ಯರು, ಗ್ಯಾರಂಟಿ ಸಮಿತಿ ಸದಸ್ಯರು, ಕೆಡಿಪಿ ಸದಸ್ಯರು ಹಾಗೂ ಹೆಚ್.ಸಿ.ಶ್ರೀಕಂಠಯ್ಯ ಸೇವಾಸಮಿತಿ ಪದಾಧಿಕಾರಿಗಳು ಹಾಜರಿದ್ದರು.

## ನೀಟ್-ಯುಜಿ ಮರು ಪರೀಕ್ಷೆ: ಪರೀಕ್ಷಾ ಕೇಂದ್ರಗಳ ವಿವರ ಪ್ರಕಟ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಜೂನ್ 21ರಂದು ನಡೆಸಲಿರುವ ನೀಟ್-ಯುಜಿ 2026 ಮರು ಪರೀಕ್ಷೆ ಕುರಿತ ಪರೀಕ್ಷಾ ಕೇಂದ್ರಗಳ ವಿವರಗಳನ್ನು ಪ್ರಕಟಿಸಿದೆ.

ಪರೀಕ್ಷಾರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ಸಂಖ್ಯೆ ಬಳಸಿ ಪರೀಕ್ಷಾ ಕೇಂದ್ರಗಳ ವಿವರ ವೀಕ್ಷಿಸ ಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದೆಂದು ಎಕ್ಸ್‌ನಲ್ಲಿ ಪ್ರಕಟಿಸಿದೆ.

ಮರುಪರೀಕ್ಷೆ ಜೂನ್ 21ರ ಮಧ್ಯಾಹ್ನ 2ರಿಂದ 5.15ರ ವರೆಗೆ ಪೆನ್-ಪೇಪರ್ ಸ್ವರೂಪದಲ್ಲಿ ವಿವಿಧ 551 ನಗರಗಳು, ವಿದೇಶಗಳ 14 ನಗರಗಳಲ್ಲಿ ನಡೆಯಲಿದೆ ಎಂದು ಸಂಸ್ಥೆ ಪ್ರಕಟಿಸಿದೆ.

ಪರೀಕ್ಷಾ ಕೇಂದ್ರದ ವಿವರಗಳ ಪತ್ರವನ್ನು ಪ್ರವೇಶ ಪತ್ರ ಎಂದು ಪರಿಗಣಿಸಲಾಗುವುದಿಲ್ಲ. ಪ್ರವೇಶಪತ್ರಗಳನ್ನು ನಂತರ ನೀಡಲಾಗುತ್ತದೆ. ವಿವರಗಳಿಗೆ ಅಧಿಕೃತ ವೆಬ್‌ಸೈಟ್ ವೀಕ್ಷಿಸುತ್ತಿರಬೇಕೆಂದು ಮನವಿ ಮಾಡಿದೆ.

ನೀಟ್-ಯುಜಿ ಪರೀಕ್ಷೆ ಮೇ 3ರಂದು ನಡೆದಿತ್ತು. ಆದರೆ, ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನಲೆ ಯಲ್ಲಿ ಪರೀಕ್ಷೆಯನ್ನು ರದ್ದುಪಡಿಸಲಾಗಿತ್ತು. ಸೋರಿಕೆ ಪ್ರಕರಣ ಕುರಿತು ಸಿಬಿಐ ತನಿಖೆ ನಡೆಯುತ್ತಿದೆ.

## ಇಂದು ನವದೆಹಲಿಯಲ್ಲಿ ಇಂಡಿಯಾ ಜನಬಂಧನ್ ಸಭೆ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರ ರಾಜಧಾನಿಯ ಕಾನ್ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಜೂನ್ 8ರ ಸೋಮವಾರ ನಡೆಯಲಿರುವ ಭಾರತೀಯ ರಾಷ್ಟ್ರೀಯ ಅಭಿವೃದ್ಧಿ ಅಂತರ್ಗತ ಮೈತ್ರಿಕೂಟ (ಇಂಡಿಯಾ) ಜನಬಂಧನ್ ಸಭೆ ಯಲ್ಲಿ 23 ರಾಜಕೀಯ ಪಕ್ಷಗಳು ಭಾಗವಹಿಲಿವೆ ಎಂದು ಕಾಂಗ್ರೆಸ್ ಹೇಳಿದೆ.

ವಿರೋಧ ಪಕ್ಷಗಳು ತಮ್ಮ ವೈವಿಧ್ಯತೆಯ ಮೂಲಕ ಒಗ್ಗಟ್ಟಿನಿಂದ ನಿಂತಿವೆ ಎಂದು ಪ್ರತಿ ಪಾದಿಸಿದೆ. ತಮ್ಮದೇಯಾದ ಕಾರಣಗಳಿಗಾಗಿ ಈ ಸಭೆಯಲ್ಲಿ ಭಾಗವಹಿಸಲು ಅಸಮರ್ಥತೆ ವ್ಯಕ್ತಪಡಿಸಿರುವ ಕೆಲವು ಪಕ್ಷಗಳಿವೆ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದು, ಸೋಮವಾರ ಮಧ್ಯಾಹ್ನ 12 ಗಂಟೆಗೆ ನವದೆಹಲಿಯ ಕಾನ್ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ನಡೆಯಲಿರುವ ಇಂಡಿಯಾ ಜನಬಂಧನ್ ಸಭೆಯಲ್ಲಿ 23 ರಾಜಕೀಯ ಪಕ್ಷಗಳು ಭಾಗವಹಿಸುವುದನ್ನು ದೃಢಪಡಿಸಿವೆ ಎಂದು ತಿಳಿಸಿದ್ದಾರೆ.

ರಮೇಶ್ ಅವರ ಪೋಸ್ಟ್ ಅನ್ನು ಟ್ಯಾಗ್ ಮಾ ಡಿರುವ ತೃಣಮೂಲ ಕಾಂಗ್ರೆಸ್ ಸಂಸದ ಡೆರೆಕ್ ಒಬ್ರೇನ್, ಸಾಮಾನ್ಯ ಮತ್ತು ಸ್ಪಷ್ಟ ಉದ್ದೇಶದೊಂದಿಗೆ ಸಭೆ ನಡೆಯುತ್ತಿದೆ. ಭಾರತ



ಒಗ್ಗಟ್ಟಾಗಿದೆ. ಅನೇಕ ಪಕ್ಷಗಳು ಸೌಹಾರ್ದತೆಯ ಭಾವನೆಯಲ್ಲಿ ಭೇಟಿಯಾಗಲು ಎದುರು ನೋಡುತ್ತಿವೆ ಎಂದಿದ್ದಾರೆ.

ಲಕ್ಷಾಂತರ ಭಾರತೀಯರ ಮತದಾನದ ಹಕ್ಕನ್ನು ಕಸಿದುಕೊಳ್ಳುವ, ಪ್ರತಿದಿನ ಸಂವಿಧಾನದ ಮೇಲೆ ದಾಳಿ ಮಾಡುವ, ತನಿಖಾ ಸಂಸ್ಥೆಗಳ ಮೂಲಕ ವಿರೋಧ ಪಕ್ಷದ ನಾಯಕರ ಮೇಲೆ ದಾಳಿ ಮಾಡುವ, ಕೋಟ್ಯಂತರ ಭಾರತೀಯರ ಜೀವನೋಪಾಯಕ್ಕೆ ಗಂಭೀರ ಹಾನಿ ಮಾಡುವ, ನಿರಂತರ ಬೆಲೆ ಏರಿಕೆಯ ಮೂಲಕ ಮನೆಯ ಬಜೆಟ್ ಅನ್ನು ಮುರಿಯುವ, ಲಕ್ಷಾಂತರ ಯುವಕರ ಭರವಸೆ ಮತ್ತು ಆಕಾಂಕ್ಷೆಗಳಿಗೆ ದ್ರೋಹ ಬಗೆಯುವ, ಹೂಡಿಕೆ ವಾತಾವರಣವನ್ನು ಕುಗ್ಗಿಸುವ ಮತ್ತು ತನ್ನ ವಿದೇಶಾಂಗ ನೀತಿಯಿಂದ ರಾಷ್ಟ್ರೀಯ ಹಿತಾಸಕ್ತಿ ಯನ್ನು ರಾಜಿ ಮಾಡಿಕೊಳ್ಳುವ ಮೋದಿ ಸರ್ಕಾರದ ನೀತಿಗಳು ಮತ್ತು ಕ್ರಮಗಳಿಗೆ ಬಲವಾದ ವಿರೋಧ ವ್ಯಕ್ತಪಡಿಸಲು ಸಭೆ ನಡೆಸಲಾಗುತ್ತಿದೆ ಎಂದಿದ್ದಾರೆ.

ಭಾರತದಂತೆಯೇ ಇಂಡಿಯಾ ಜನಬಂಧನ್ ತನ್ನ ವೈವಿಧ್ಯತೆಯ ಮೂಲಕ ಒಗ್ಗಟ್ಟಿನಿಂದ ನಿಂತಿದೆ. 2029ರ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಇಂಡಿಯಾ ಬಣವು ಭವಿಷ್ಯದ ಕಾರ್ಯತಂತ್ರದ ಬಗ್ಗೆ ಚರ್ಚಿಸಲು ಸಜ್ಜಾಗಿದೆ. ರಾಷ್ಟ್ರೀಯ ವಿಷಯಗಳಲ್ಲಿ ಮೋದಿ ಸರ್ಕಾರವನ್ನು ಮೂಲೆಗುಂಪು ಮಾಡಲು ಜಂಟಿ ಕಾರ್ಯತಂತ್ರವನ್ನು ರೂಪಿಸಲು ಎದುರು ನೋಡುತ್ತಿದೆ.

ತಮಿಳುನಾಡಿನಲ್ಲಿ ಕಾಂಗ್ರೆಸ್ ದ್ರೋಹ ಬಗೆದು ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡಿದೆ ಎಂದು ಡಿಎಂಕೆ ಆರೋಪಿಸಿದ್ದರೆ ಕೇರಳದಲ್ಲಿ ಎಡಪಂಥೀಯರು ಬಿಜೆಪಿ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದರು ಎಂಬ ಕಾಂಗ್ರೆಸ್‌ನ ಉನ್ನತ ನಾಯಕರ ಆರೋಪದ ಬಗ್ಗೆ ಭಾರತ-ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019